# ನಿಡಗುಂದಿ ವಲಯದ ಒಕ್ಕೂಟ ಪದಾಧಿಕಾರಿಗಳ ತರಬೇತಿ ಕಾರ್ಯಾಗಾರ



**ಬಸವನ ಬಾಗೇವಾಡಿ :** ತಾಲೂಕಿನ ನಿಡಗುಂದಿ ವಲಯದ ಒಕ್ಕೂಟ ಪದಾಧಿಕಾರಿಗಳ ತರಬೇತಿ ಕಾರ್ಯಕ್ರಮವನ್ನು ಜಿಲ್ಲಾ ನಿರ್ದೇಶಕರಾದ ಸಂತೋಷ ಕುಮಾರ ಅವರು ದೀಪ ಪ್ರಜ್ವಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ನಂತರಮಾತನಾಡಿದಅವರುನಾಯಕತ್ವಎನ್ನುವುದು ಅಧಿಕಾರವಲ್ಲ. ಅದೊಂದು ಅಪೂರ್ವ ಅವಕಾಶ. ಉತ್ತಮ ತರಬೇತಿಯ ಮೂಲಕ ತನ್ನ ಕ್ರಿಯಾಶೀಲ ವ್ಯಕ್ತಿತ್ವವನ್ನು ಜಾಗೃತಗೊಳಿಸಬೇಕು. ಯೋಜಿತ ಕಾರ್ಯಕ್ರಮಗಳನ್ನು ಮಾಡಲು ತರಬೇತಿಗಳು ಅಗತ್ಯ ಎಂದು ಹೇಳಿದರು.

ಬಸವನ ಬಾಗೇವಾಡಿ ತಾಲೂಕು ಯೋಜನಾಧಿಕಾರಿ ಪ್ರಸನ್ನ ಒಕ್ಕೂಟದ ನಿರ್ವಹಣೆ ಮಾಸಿಕ ವರದಿಗಳ ಪರಿಶೀಲನೆ ಎಸ್.ಬಿ ಮತ್ತು ಸಿಸಿ ಖಾತೆ ವ್ಯತ್ಯಾಸ ಮತ್ತು ಲಾಭ ನಷ್ಟದ, ಆಂತರಿಕ ಲೆಕ್ಕ ಪರಿಶೋಧನೆ, ಬಡ್ಡಿ ಲೆಕ್ಕಾಚಾರ,ಮತ್ತು ಮರುಪಾವತಿ ಚೀಟಿ ಲೆಕ್ಕಪರಿಶೋಧನೆ ಬಗ್ಗೆ ಮಾಹಿತಿಯನ್ನು ನೀಡಿದರು.

ಜಿಲ್ಲಾ ವಿಚಕ್ಷಣಾಧಿಕಾರಿ ಯಮನೂರಪ್ಪ ನಾಗರಾಳ ರವರು ಮಾತನಾಡಿ ಒಕ್ಕೂಟ ಉದ್ದೇಶಗಳು ಮಹತ್ವದ ಬಗ್ಗೆ ತಿಳಿಸಿದರು ನಂತರ ಒಕ್ಕೂಟದ ಪ್ರಾತ್ಯಕ್ಷಿಕೆ ಮಾಡಿಸಿದರು

ಸಿಸಿ ಖಾತೆಯ ನಿರ್ವಹಣೆ ಬಗ್ಗೆ ಬಡ್ಡಿ ಲಕ್ಕಾಚಾರದ ಬಗ್ಗೆ ಮಾಹಿತಿ ನೀಡಿದರು ?

ಈ ಸಂದರ್ಭದಲ್ಲಿ ತಾಲೂಕಿನ ವಿಚಕ್ಷಣಾಧಿಕಾರಿ ರೋಜಾ ಗಸ್ತಿ ರವರು ಹಾಗೂ ವಲಯದ ಮೇಲ್ವಿಚಾರಕರಾದ ಅಂಬಿಕಾ ಪಾಟೀಲ್ ರವರು ಹಾಗೂ ವಲಯದ ಸೇವಾ ಪ್ರತಿನಿಧಿಗಳು ಉಪಸ್ಥಿತರಿದ್ದರು.

# ಕಬ್ಬು ನುರಿಸುವ ಹಂಗಾಮಿಗೆ ಶಾಸಕ ಗುಡಗುಂಟಿ ಚಾಲನೆ



**ಜಮಖಂಡಿ :** ತಾಲೂಕಿನ ಸಿದ್ದಾಪುರದ ಪ್ರಭುಲಿಂಗೇಶ್ವರ ಸಕ್ಕರೆ ಕಾರ್ಖಾನೆಯಲ್ಲಿ ಸನ್ 2025–26 ನೇ ಸಾಲಿನ ಕಬ್ಬು ನುರಿಸುವ ಹಂಗಾಮಿನ ಪ್ರಾರಂಭೋತ್ಸವ ಕಾರ್ಯಕ್ರಮಕ್ಕೆ ನಾಡೋಜ ಶಾಸಕ ಜಗದೀಶ ಗುಡಗುಂಟಿ ಅವರು ಚಾಲನೆ ನೀಡಿದರು.

ಉದ್ಯಮಿ ವಿರುಪಾಕ್ಷಯ್ಯ ಗುಡಗುಂಟಿ ದಂಪತಿ ಸಮೇತರಾಗಿ ಪ್ರಸಕ್ತ ವರ್ಷ ಕಬ್ಬು ನುರಿಸುವ ಹಂಗಾಮಿನ ಪ್ರಾರಂಭೋತ್ಸವದ ಸಂದರ್ಭದಲ್ಲಿ ರೈತ ಕುಟುಂಬದಿಂದ ಪೂಜಿಸಲ್ಪಡುವ ಎತ್ತುಗಳ ಪಾದಗಳಿಗೆ ಪೂಜೆ ಸಲ್ಲಿಸುವ ಮೂಲಕ ರೈತ ಸಂಸ್ಕೃತಿಗೆ ಮೆರಗು ತಂದರು.

ನಂತರ ನಡೆದ ಧಾರ್ಮಿಕ ಪೂಜಾ ವಿಧಿ ವಿಧಾನಗಳಲ್ಲಿ ಭಾಗವಹಿಸುವ ಮೂಲಕ ವಿಶೇಷ ಪೂಜೆಗಳಲ್ಲಿ ತೊಡಗಿಕೊಂಡಿದ್ದರು.

ಈ ಸಂದರ್ಭದಲ್ಲಿ ಆಶಾದೇವಿ ಗುಡಗುಂಟಿ, ಕೀರ್ತಿ ಗುಡಗುಂಟಿ ಸಹಿತ ಹಲವು ನಿರ್ದೇಶಕರು, ರೈತರು ಮತ್ತು ಕಾರ್ಖಾನೆ ಅಧಿಕಾರಿಗಳು, ಕಾರ್ಮಿಕರು ಭಾಗವಹಿಸಿದ್ದರು.

# ಎರಡನೇ ಜಾಗತಿಕ ಮಹಾಯುದ್ಧದ ಕುರಿತು ಉಪನ್ಯಾಸ



**ಜಮಖಂಡಿ:**ಇಲ್ಲಿಯಸರಕಾರಿಪ್ರಥಮದರ್ಜೆ ಮಹಿಳಾ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರ , ರಾಜ್ಯಶಾಸ್ತ್ರ ವಿಭಾಗ, ಇತಿಹಾಸ ವಿಭಾಗ ಹಾಗೂ ಐ.ಕ್ಯೂ.ಎ.ಸಿ. ಇವರ ಸಹಯೋಗದೊಂದಿಗೆ ವಿಶ್ವ ಸಂಸ್ಥೆಯ ದಿನಾಚರಣೆಯ ಅಂಗವಾಗಿ ಅಕ್ಟೋಬರ್ 27 ರಂದು "ಎರಡನೆಯ ಜಾಗತಿಕ ಮಹಾಯುದ್ಧ" ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಡಾ. ಕೆ. ಚೆನ್ನಬಸಪ್ಪ, ವಿಶ್ರಾಂತ ಪ್ರಾಧ್ಯಾಪಕರು, ಇತಿಹಾಸವಿಭಾಗ,ಬಿ.ಎಲ್.ಡಿ.ಶಿಕ್ಷಣಸಂಸ್ಥೆ, ಜಮಖಂಡಿ ಇವರು ವಿದ್ಯಾರ್ಥಿನಿಯರನ್ನು ಕುರಿತು ಮಾತನಾಡುತ್ತಾ, ಇಂದು ನಾವು ಚರ್ಚಿಸುತ್ತಿರುವ ಜಾಗತಿಕ ಎರಡನೆಯ ಮಹಾಯುದ್ಧ ಎಂಬ ವಿಷಯವು ಕೇವಲ ಇತಿಹಾಸದ ಒಂದು ಅಧ್ಯಾಯವಲ್ಲ – ಅದು ಮಾನವ ಕುಲಕ್ಕೆ ಅಮೂಲ್ಯ ಪಾಠ ಕಲಿಸಿದ ಘಟನೆ. ಎರಡನೆಯ ಮಹಾ ಯುದ್ಧವು ವಿಶ್ವದ ಸುಮಾರು ಎಲ್ಲಾ ಪ್ರಮುಖ ರಾಷ್ಟ್ರಗಳನ್ನು ಒಳಗೊಂಡಿತ್ತು. ಒಂದು ಬದಿ ಜರ್ಮನಿ, ಇಟಲಿ ಮತ್ತು ಜಪಾನ್ ಇದ್ದರೆ, ಇನ್ನೊಂದು ಬದಿ ಬ್ರಿಟನ್, ಫ್ರಾನ್ಸ್, ಅಮೇರಿಕಾ ಮತ್ತು ರಷ್ಯಾ ಮುಂತಾದ ರಾಷ್ಟ್ರಗಳು ಇದ್ದವು. ಜರ್ಮನಿಯ ಅತಿರೇಕಿ ನಾಯಕ ಅಡಾಲ್ಫ್ ಹಿಟ್ಲರ್ನ ವಿಸ್ತಾರ ನೀತಿಯೇ ಈ ಯುದ್ಧದ ಪ್ರಮುಖ ಕಾರಣಗಳಲ್ಲಿ ಒಂದಾಗಿತ್ತು. ಎರಡನೆಯ ಮಹಾ ಯುದ್ಧವು ಆರು ವರ್ಷಗಳ ಕಾಲ ನಡೆಯಿತು. ಯುದ್ಧದ ಅಂತ್ಯದಲ್ಲಿ ಜರ್ಮನಿ ಸೋಲನ್ನು ಅನುಭವಿಸಿತು. ಜಪಾನ್ ಮೇಲೆ ಅಣುಬಾಂಬ್ ಬಿದ್ದಿತು. ಲಕ್ಷಾಂತರ ಜನರು ಪ್ರಾಣ ಕಳೆದುಕೊಂಡರು. ಈ ಭೀಕರ ಯುದ್ಧದ ಬಳಿಕ, ಮತ್ತೆ ಇಂತಹ ದುರಂತವು ಸಂಭವಿಸಬಾರದೆಂಬ ದೃಢ ಸಂಕಲ್ಪದಿಂದ ವಿಶ್ವಸಂಸ್ಥೆ 1945 ರಲ್ಲಿ ಸ್ಥಾಪನೆಯಾಯಿತು. ಅದರ ಮುಖ್ಯ ಉದ್ದೇಶಗಳು: ವಿಶ್ವದಲ್ಲಿ ಶಾಂತಿ ಸ್ಥಾಪನೆ, ರಾಷ್ಟ್ರಗಳ ಮಧ್ಯೆ ಸಹಕಾರ ವೃದ್ಧಿ, ಮಾನವ ಹಕ್ಕುಗಳ ರಕ್ಷಣೆಯೊಂದಿಗೆ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯನ್ನು ಉತ್ತೇಜಿಸುವುದು. ವಿಶ್ವಸಂಸ್ಥೆಯ ಪ್ರಮುಖ ಅಂಗಗಳು: ಸಾಮಾನ್ಯ ಸಭೆ – ಎಲ್ಲ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳು ಭಾಗವಹಿಸುವ ತೀರ್ಮಾನ ಮಂಡಳಿ;

ರಾಷ್ಟ್ರ ಪರಿಷತ್ – ಶಾಂತಿ ಮತ್ತು ಭದ್ರತೆಗೆ ಸಂಬಂಧಿಸಿದನಿರ್ಣಯಗಳನ್ನುಕೈಗೊಳ್ಳುವ ಪ್ರಮುಖಅಂಗ; ಆರ್ಥಿಕ ಮತ್ತು ಸಾಮಾಜಿಕ ಮಂಡಳಿ – ಅಭಿವೃದ್ಧಿ, ಆರೋಗ್ಯ, ಶಿಕ್ಷಣ ಮತ್ತು ಮಾನವೀಯ ಸಹಾಯ ಕಾರ್ಯಕ್ರಮಗಳನ್ನು ನೋಡಿಕೊಳ್ಳುತ್ತದೆ; ವಿಶ್ವಸಂಸ್ಥೆ ಮಂಡಳಿ – ನಂಬಿಕೆ ಪ್ರದೇಶಗಳ ನಿರ್ವಹಣೆಗೆ; ಅಂತರರಾಷ್ಟ್ರೀಯ ನ್ಯಾಯಾಲಯ – ರಾಷ್ಟ್ರಗಳ ನಡುವಿನ ವಿವಾದಗಳನ್ನು ನ್ಯಾಯಾಧೀಶರ ಮೂಲಕ ಪರಿಹರಿಸುತ್ತದೆ; ಮತ್ತು ಸಚಿವಾಲಯ ವಿಶ್ವ ಸಂಸ್ಥೆಯ ಆಡಳಿತಾತ್ಮಕ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸುತ್ತದೆ. ವಿಶ್ವ ಸಂಸ್ಥೆಯ ಸಹಾಯದಿಂದ ಹಲವಾರು ಉಪ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ – ಶಿಕ್ಷಣ, ವಿಜ್ಞಾನ ಮತ್ತು ಸಂಸ್ಕೃತಿ ಕ್ಷೇತ್ರದಲ್ಲಿ; ಆರೋಗ್ಯ ಕ್ಷೇತ್ರದಲ್ಲಿ; ಕೃಷಿ ಮತ್ತು ಆಹಾರದಲ್ಲಿ; ಕಾರ್ಮಿಕರ ಹಕ್ಕುಗಳಲ್ಲಿ ಆರ್ಥಿಕ ಸಹಾಯ ಮತ್ತು ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ. ರಷ್ಯಾ ಕ್ರಾಂತಿಯು (1917) ಕೂಡ ಜಾಗತಿಕ ರಾಜಕೀಯವನ್ನು ಸಂಪೂರ್ಣ ಬದಲಿಸಿದ ಘಟನೆಯಾಗಿತ್ತು. ಅದರ ಪರಿಣಾಮವಾಗಿ ಹೊಸ ಸಾಮಾಜಿಕ ಮತ್ತು ಆರ್ಥಿಕ ತತ್ವಗಳು ವಿಶ್ವದಾದ್ಯಂತ ಹರಡಿದವು. ಇವೆಲ್ಲವು ಜಾಗತಿಕ ಇತಿಹಾಸದಲ್ಲಿ ಮಹತ್ವದ ಘಟ್ಟಗಳಾಗಿವೆ. ಇಂತಹ ಘಟನೆಗಳು ನಮಗೆ ಒಂದು ಮಹತ್ತರ ಪಾಠ ಕಲಿಸುತ್ತವೆ: ಶಾಂತಿ, ಸಹಕಾರ ಮತ್ತು ಮಾನವೀಯತೆ ಮಾತ್ರ ವಿಶ್ವವನ್ನು ಸ್ಥಿರವಾಗಿ ಉಳಿಸಬಹುದು. ಯುದ್ಧದಿಂದ ಯಾವುದೇ ದೇಶಕ್ಕೆ ನಿಜವಾದ ಅರ್ಥದಲ್ಲಿ ಜಯ ಸಿಕ್ಕಿರುವುದಿಲ್ಲ ; ಆದರೆ ಶಾಂತಿಯಿಂದ ಮಾತ್ರ ಪ್ರಗತಿ ಮತ್ತು ಅಭಿವೃದ್ಧಿ ಸಾಧ್ಯ. ಆದ್ದರಿಂದ, ವಿಶ್ವ ಸಂಸ್ಥೆಯ ಉದ್ದೇಶಗಳು ಕೇವಲ ರಾಷ್ಟ್ರಗಳಿಗೆ ಮಾತ್ರವಲ್ಲ, ಪ್ರತಿಯೊಬ್ಬ ಮಾನವನಿಗೂ ಅನ್ವಯವಾಗುತ್ತವೆ ಎಂಬುದನ್ನು ಮನದಲ್ಲಿಟ್ಟುಕೊಳ್ಳಬೇಕು ಎಂದು ಹೇಳಿದರು. ಅಧ್ಯಕ್ಷತೆಯನ್ನು ವಹಿಸಿದ್ದ ಮಹಾವಿದ್ಯಾಲಯದ ಪ್ರಾಂಶುಪಾಲೆ ಡಾ. ಸುನಂದಾ ಎಸ್. ಶಿರೂರ ಅವರು ಮಾತನಾಡುತ್ತಾ, ಮೊದಲನೆಯ ಮಹಾಯುದ್ಧದ (1914–1918) ನಂತರ ವಿಶ್ವದಲ್ಲಿ ಶಾಂತಿ ಕಾಪಾಡುವ ಉದ್ದೇಶದಿಂದ ಲೀಗ್ ಆಫ್ ನೇಷನ್ಸ್ ಎಂಬ ಸಂಘಟನೆ ಸ್ಥಾಪಿಸಲಾಯಿತು. ಆದರೆ ಅದು ತನ್ನ ಉದ್ದೇಶಗಳಲ್ಲಿ ಯಶಸ್ವಿಯಾಗಲಿಲ್ಲ. ಅದರ ಪರಿಣಾಮವಾಗಿ 1939 ರಲ್ಲಿ ಎರಡನೆಯ ಮಹಾಯುದ್ಧ ಸ್ಫೋಟಗೊಂಡಿತು. 1939 ರಿಂದ 1945 ರವರೆಗೆ ನಡೆದ ಈ ಮಹಾಯುದ್ಧವು ಲಕ್ಷಾಂತರ ಜನರ ಜೀವ ಕಸಿದುಕೊಂಡ ಭೀಕರ ಅವಧಿಯಾಗಿತ್ತು. ಯುದ್ಧವು ರಾಷ್ಟ್ರಗಳ ಅಹಂಕಾರ, ವಿಸ್ತಾರ ನೀತಿಗಳು ಮತ್ತು ಅಧಿಕಾರದ ಹಂಬಲದಿಂದ ಹೇಗೆ ವಿಶ್ವದ ಶಾಂತಿಯನ್ನು ನಾಶಮಾಡುತ್ತದೆ ಎಂಬುದಕ್ಕೆ ಇದು ಅತ್ಯಂತ ದೊಡ್ಡ ಉದಾಹರಣೆ. ಜರ್ಮನಿಯ ಹಿಟ್ಲರನ ದುರಾಸೆ, ಜಪಾನ್ನ ವಿಸ್ತಾರ ನೀತಿ ಹಾಗೂ ಇತರ ರಾಷ್ಟ್ರಗಳ ರಾಜಕೀಯ ಸಂಘರ್ಷಗಳು ಯುದ್ಧಕ್ಕೆ ಕಾರಣವಾದವು. ಆದರೆ ಯುದ್ಧದ ಅಂತ್ಯದಲ್ಲಿ ಎಲ್ಲ ರಾಷ್ಟ್ರಗಳು ಅರಿತುಕೊಂಡದ್ದು ಒಂದೇ – ಶಾಂತಿಯು ಶಕ್ತಿ, ಸಹಕಾರವು ಪ್ರಗತಿ. ಈ ಅರಿವಿನಿಂದಲೇ ನಂತರ ವಿಶ್ವಸಂಸ್ಥೆ ಸ್ಥಾಪನೆಯಾಯಿತು. ವಿಶ್ವ ಸಂಸ್ಥೆ ಎಂದರೆ ಕೇವಲ ಒಂದು ಸಂಸ್ಥೆಯಲ್ಲ – ಅದು ಮಾನವೀಯತೆ, ಶಾಂತಿ ಮತ್ತು ಸಹಕಾರದ ಪ್ರತೀಕವಾಗಿದೆ. ಎರಡನೆಯ ಮಹಾಯುದ್ಧದ ಭೀಕರ ಅನುಭವದ ನಂತರ, ವಿಶ್ವದ ರಾಷ್ಟ್ರಗಳು ಒಗ್ಗೂಡಿ ಶಾಂತಿಯ ಪರ ಧ್ವನಿಯೆತ್ತಿದ ಕ್ಷಣ ಅದು. ಆ ದಿನದಿಂದ ಇಂದಿನವರೆಗೂ, ವಿಶ್ವಸಂಸ್ಥೆ ವಿಶ್ವದಲ್ಲಿ ಮಾನವ ಹಕ್ಕುಗಳ ರಕ್ಷಣೆ, ಬಡತನ ನಿರ್ಮೂಲನೆ, ಶಿಕ್ಷಣದ ವಿಸ್ತರಣೆ ಮತ್ತು ಶಾಂತಿಯ ಸ್ಥಾಪನೆಗಾಗಿ ನಿರಂತರವಾಗಿ ಶ್ರಮಿಸುತ್ತಿದೆ. ಇಂತಹ ದಿನಗಳಲ್ಲಿ ಇತಿಹಾಸವನ್ನು ಸ್ಮರಿಸುವುದಷ್ಟೇ ಅಲ್ಲ – ಅದರ ಅರ್ಥವನ್ನು ತಿಳಿದುಕೊಳ್ಳುವುದು ಕೂಡ ಅಗತ್ಯ. ವಿಶ್ವಸಂಸ್ಥೆ ನಮಗೆ ಕಲಿಸುವ ಪಾಠವೇನೆಂದರೆ: ವಿಭಿನ್ನ ರಾಷ್ಟ್ರಗಳು, ಭಾಷೆಗಳು, ಧರ್ಮಗಳು ಇದ್ದರೂ ಸಹ ಸಹಕಾರ ಮತ್ತು ಪರಸ್ಪರ ಗೌರವದ ಮನೋಭಾವದಿಂದ ಬದುಕುವುದು ಸಾಧ್ಯ. ಅದೇ ರೀತಿಯಾಗಿ, ನಿಮ್ಮ ಜೀವನದಲ್ಲೂ ಸ್ಪರ್ಧೆ, ತೊಂದರೆಗಳು, ಅಸಮತೋಲನಗಳು ಇರುತ್ತವೆ. ಆದರೆ ಸಹನೆ, ಶ್ರಮ ಮತ್ತು ಸಹಕಾರದಿಂದ ನೀವು ಯಾವುದೇ ಗುರಿಯನ್ನು ಸಾಧಿಸಬಹುದು. ನೀವು ಇಂದಿನ ವಿದ್ಯಾರ್ಥಿಗಳು ಮಾತ್ರವಲ್ಲ, ನಾಳೆಯ ರಾಷ್ಟ್ರ ನಿರ್ಮಾತೃಗಳು. ನಿಮ್ಮಲ್ಲಿ ಉತ್ಸಾಹವಿದೆ. ಕಲಿಕೆಯ ಬಯಕೆಯಿದೆ. ಅದನ್ನು ಸಕಾರಾತ್ಮಕ ದಿಕ್ಕಿನಲ್ಲಿ ಮುನ್ನಡೆಸಬೇಕು. ವಿಶ್ವಸಂಸ್ಥೆ ಶಾಂತಿಗಾಗಿ ಹೇಗೆ ಕೆಲಸ ಮಾಡಿತೋ, ಅದೇ ರೀತಿಯಾಗಿ ನೀವು ನಿಮ್ಮ ಸಮಾಜದಲ್ಲಿ ಒಗ್ಗಟ್ಟು, ಶಾಂತಿ ಮತ್ತು ಪ್ರಗತಿಯ ಸಂದೇಶವನ್ನು ಹಂಚುವವರಾಗಬೇಕು. ಶ್ರೇಷ್ಠ ಸಮಾಜ ಸುಧಾರಕರಾದ ಬಸವಣ್ಣನವರ ಪ್ರಸಿದ್ಧ ಈ ವಚನ – “ಇವನಾರವ, ಇವನಾರವ, ಇವನಾರವ ನೆಂದೆನಿಸದಿರಯ್ಯಾ. ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ. ಕೂಡಲ ಸಂಗಮದೇವಾ, ನಿಮ್ಮ ಮನೆಯ ಮಗನೆಂದೆನಿಸಯ್ಯಾ.” – ಮಾನವೀಯತೆ ಮತ್ತು ಸಮಾನತೆಯ ಮಹಾನ್ ಸಂದೇಶವನ್ನು ನೀಡುತ್ತದೆ. ಈ ವಚನದಲ್ಲಿ ಎಲ್ಲರೂ ಒಂದೇ, ಯಾರೂ ಬೇರೆ ಅಲ್ಲ – ಎಲ್ಲರೂ ನಮ್ಮವರೇ ಎಂಬ ಭಾವನೆ ವ್ಯಕ್ತವಾಗುತ್ತದೆ. ಇದೇ ತತ್ವವು ವಿಶ್ವಸಂಸ್ಥೆಯ ಸ್ಥಾಪನೆಯ ಮೂಲಭೂತ ಉದ್ದೇಶಕ್ಕೂ ಹತ್ತಿರವಾಗಿದೆ. ಎರಡನೆಯ ಮಹಾಯುದ್ಧದ ಭೀಕರತೆ ಬಳಿಕ, ವಿಶ್ವದ ರಾಷ್ಟ್ರಗಳು ಭೇದಭಾವ, ವೈಮನಸ್ಸು, ಅಹಂಕಾರವನ್ನು ತೊರೆದು “ಎಲ್ಲರೂ ಒಂದೇ ಕುಟುಂಬ” ಎಂಬ ಮೌಲ್ಯದಿಂದ ಒಗ್ಗಟ್ಟಾಗಬೇಕೆಂಬ ಧ್ಯೇಯದಿಂದ ವಿಶ್ವ ಸಂಸ್ಥೆಯನ್ನು ಸ್ಥಾಪಿಸಿದವು. ಬಸವಣ್ಣನವರ ಈ ವಚನದ ಸಾರವೇ – ಶಾಂತಿ, ಸಹಕಾರ ಮತ್ತು ಮಾನವೀಯತೆಯ ಮಾರ್ಗದಲ್ಲಿ ಸಾಗುವುದು – ಇದೇ ನಿಜವಾದ ವಿಶ್ವ ಸಂಸ್ಥೆಯ ಸಂದೇಶವಾಗಿದೆ. ನೀವು ಓದುತ್ತಿರುವ ವಿಷಯಗಳಲ್ಲಿ ಕೌಶಲ್ಯವನ್ನು ಬೆಳೆಸಿ. ಆದರೆ ಅದಕ್ಕಿಂತಲೂ ಮುಖ್ಯವಾದದ್ದು – ಮಾನವೀಯತೆ, ಕರುಣೆ ಮತ್ತು ಸೇವಾಭಾವ. ಈ ಮೌಲ್ಯಗಳನ್ನು ಪಾಲಿಸಿಕೊಂಡು ಹೋದರೆ, ನಿಮ್ಮ ಜೀವನವೂ ಅರ್ಥಪೂರ್ಣವಾಗುತ್ತದೆ. ಸಮಾಜವೂ ಸುಂದರವಾಗುತ್ತದೆ ಎಂದು ಹೇಳಿದರು.

ಡಾ. ಬಿ. ಎಮ್. ಕೊರಬು ಸ್ವಾಗತಿಸಿದರು. ಎಸ್. ಪಿ. ಆಲಗೂರ ಮಾಲಾರ್ಪಣೆ ಮಾಡಿದರು. ಎ. ಎಸ್. ಪೂಜಾರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಎಮ್. ಎಮ್. ಅಂಬಲಿ ವಂದಿಸಿದರು. ಆರ್. ಎಸ್. ಜಾಧವ ನಿರೂಪಿಸಿದರು.

ಈ ಸಂದರ್ಭದಲ್ಲಿ ಡಾ. ಎಮ್. ಎಮ್. ಮಂಟೂರ, ಡಾ. ಎಸ್. ಎನ್. ಮಣಕವಾಡ, ಡಾ. ಡಿ. ಬಿ. ಚೆನ್ನಪ್ಪಗೋಳ, ಯು. ಎಸ್. ದೇಸಾಯಿ, ಡಾ. ಎಸ್. ಎಸ್. ಸಿದ್ದಾಪೂರ, ಡಾ. ಬಿ. ಎನ್. ಜಾಧವ, ಡಾ. ಎ. ವಾಯ್. ಕಾಂಬಳೆ, ಸದಾಶಿವ ದೇಸ್ನೂಟ, ಸಂಜೀವಕುಮಾರ, ತೀಥೇ'ಶ್ ಎಸ್. ಎನ್., ಸುನೀಲ ಕಾಂಬಳೆ, ಶ್ರೀಮತಿ ಸಂಗೀತಾ ಕೋಟ್ಯಾಳ, ಸಿ. ವಿ. ಗುಣದಾಳ, ಅಪ್ಪಣ್ಣ ಮಾಳಿ, ಡಾ. ಆಶಾ ಬಿ. ಎನ್., ಡಾ. ಶೀಲಾ ಹಿರೇಮಠ, ಪ್ರಭುಗೌಡ ಚಾಂದಕವಟೆ ಉಪಸ್ಥಿತರಿದ್ದರು.

# ಕೃಷ್ಣ ಪರಮಾತ್ಮನಿಗೆ ಛಪ್ಪನ್ ಭೋಗ ಪ್ರಸಾದ ಅರ್ಪಣೆ

**ಬನಹಟ್ಟಿ :** ಇಲ್ಲಿನ ಬಾಲಾಜಿ ಮಂದಿರದಲ್ಲಿ ಮಾಹೇಶ್ವರಿ ಸಮಾಜದ ಆಶ್ರಯದಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ಶ್ರೀಕೃಷ್ಣ ಪರಮಾತ್ಮನಿಗೆ ಛಪ್ಪನ್ ಭೋಗ ಪ್ರಸಾದ ಸಲ್ಲಿಸುವ ಕಾರ್ಯಕ್ರಮ ಸಂಭ್ರಮ ಸಡಗರದಿಂದ ನಡೆಯಿತು.

ಸಮಾಜದ ಹಿರಿಯರಾದ ದಯಾರಾಮ ರಾಠಿ ಮಾತನಾಡಿ, ಛಪ್ಪನ್ ಭೋಗ ನೈವೇದ್ಯವನ್ನು ಶ್ರೀಕೃಷ್ಣ ಜನ್ಮಾಷ್ಠಮಿ ಮತ್ತು ಗೋವರ್ಧನ ಪೂಜಾ ಸಂದರ್ಭದಲ್ಲಿ ಹಮ್ಮಿಕೊಳ್ಳುವ ಕಾರ್ಯಕ್ರಮವಾಗಿದೆ.

ಭಕ್ತರು 56 ತರಹದ ವಿಶೇಷ ಅಡುಗೆಯನ್ನು ತಯಾರಿಸಿಕೊಂಡು ಬಂದು ನೈವೇದ್ಯ ಸಲ್ಲಿಸುವ ಪರಂಪರೆಯಾಗಿದೆ ಎಂದರು.

ಸಮಾಜದ ಅಧ್ಯಕ್ಷ ಮುರಲೀಧರ ಕಾಬ್ರಾ ಮಾತನಾಡಿ, ನಮ್ಮ ಆಚರಣೆಗಳನ್ನು ಹಿರಿಯರ ಮಾರ್ಗದರ್ಶನದಲ್ಲಿ



ಯುವಕರು ಮುಂದುವರೆಸಿಕೊಂಡು ಹೋಗುವ ಮಹತ್ವದ ಜವಾಬ್ದಾರಿಯನ್ನು ಹೊಂದಿದ್ದಾರೆ ಎಂದರು.

ಭಾನುವಾರ ಬೆಳಿಗ್ಗೆ ದೇವಸ್ಥಾನದಲ್ಲಿ ಸಮಾಜದ ಪುರಷರು ಮತ್ತು ಮಹಿಳೆಯರು ಕೂಡಿಕೊಂಡು ವಿಶೇಷ ಪೂಜೆಯನ್ನು ನೆರವೇರಿಸಿ, ಸಾಮೂಹಿಕ ಮಂಗಳಾರುತಿಯನ್ನು ನೆರವೇರಿಸಿದರು. ನಂತರ ಛಪ್ಪನ್ ಭೋಗದ ಪ್ರಸಾದವನ್ನು ಎಲ್ಲರಿಗೂ ವಿತರಣೆ ಮಾಡಲಾಯಿತು.

ಮಂದಿರದ ಅರ್ಚಕ ಗಿರೀಶ ಚತುರ್ವೇದಿ, ಉಪಾಧ್ಯಕ್ಷ ನಾರಾಯಣ ಮಾಲಪಾಣಿ, ಕಾರ್ಯದರ್ಶಿ ಶ್ರೀನಿವಾಸ ಭಟ್ಟಡ, ಖಜಾಂಚಿ ಸಂಜಯ ಡಾಗಾ, ಪ್ರಮುಖರಾದ ದ್ವಾರಕಾಧೀಶ ಭಟ್ಟಡ,

ಓಂಪ್ರಕಾಶ ಕಾಬ್ರಾ, ಮುಕುಂದ ಕಾಬ್ರಾ, ಬ್ರಿಜ್ಮೋಹನ ಡಾಗಾ, ಗೋಪಾಲ ಭಟ್ಟಡ, ಸಂತೋಷ ಲಡ್ಡಾ, ವಿಜಯ ರಾಠಿ, ಲಲಿತ ಕಾಬ್ರಾ ಸೇರಿದಂತೆ ಇನ್ನೂ ಅನೇಕ ಭಗಿನಿಯರು ಭಾಗವಹಿಸಿದ್ದರು.

# ಸೋಮೈಯಾ ಸಕ್ಕರೆ ಕಾರ್ಖಾನೆ ತೂಕದ ಸೇತುವೆ ಪರಿಶೀಲನೆ




**ಮಹಾಲಿಂಗಪುರ :** ಸಮೀಪದ ಸಮೀರವಾಡಿಯ ಗೋದಾವರಿ ಬಯೋ ರಿಫೈನರೀಜ್ ಲಿಮಿಟೆಡ್ ಸಕ್ಕರೆ ಕಾರ್ಖಾನೆಯಲ್ಲಿ

ಸರ್ಕಾರದ ನಿರ್ದೇಶನದಂತೆ ತೂಕದ ಸೇತುವೆಯನ್ನು ಕಾನೂನು ಮಾಪನಶಾಸ್ತ್ರ ಇಲಾಖೆ ಜಿಲ್ಲಾ ಸಹಾಯಕ ನಿಯಂತ್ರಣಾಧಿಕಾರಿ ಅಮರೇಶ ಪಾನಿಶೆಟ್ಟರ ಶನಿವಾರ ಪರಿಶೀಲಿಸಿದರು.

ತೂಕದ ಸೇತುವೆಯ ಪರಿಶೀಲನೆ ಕಿಟ್ ನೊಂದಿಗೆ ಕಾರ್ಖಾನೆಗೆ ಆಗಮಿಸಿದ್ದ ಅವರು ಡಿಜಿಟಲ್ ಲೋಡ್ ಸೆಲ್ಗಳನ್ನು ರೈತರ ಸಮ್ಮುಖದಲ್ಲಿ ಪರಿಶೀಲಿಸಿದರು. ನಂತರ ತೂಕದ ಯಂತ್ರ ಸರಿಯಾಗಿ ಇರುವ ಕುರಿತು ದೃಢೀಕರಣ ಪತ್ರವನ್ನು ಕಾರ್ಖಾನೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಿ. ಆರ್. ಬಕ್ಷಿ ಅವರಿಗೆ ವಿತರಿಸಿದರು.

ಕಾರ್ಖಾನೆಯು ಡಿಜಿಟಲ್ ಲೋಡ್ ಸೆಲ್ ಅಳವಡಿಸಿದ್ದರಿಂದ ತೂಕದಲ್ಲಿ ಪಾರದರ್ಶಕತೆ ಇರುವುದರಿಂದ ರೈತರು ಸಂತಸ ವ್ಯಕ್ತಪಡಿಸಿದರು.

ರೈತ ಮುಖಂಡರಾದ ರಾಮನಗೌಡ ಪಾಟೀಲ, ಬಿ. ಜಿ. ಹೊಸೂರ, ಸದಾಶಿವ ಕಂಬಳಿ, ವಿ. ಆರ್. ಕನಕರೆಡ್ಡಿ, ಆರ್. ಬಿ. ಕಲ್ಲಾರ್, ಬಿ. ಎಸ್. ಪಾಟೀಲ, ರವೀಂದ್ರ ಉಳ್ಳಾಗಡ್ಡಿ ಹಾಗೂ ಕಾರ್ಖಾನೆ ಅಧಿಕಾರಿಗಳು ಹಾಜರಿದ್ದರು.

# ಧಾರವಾಡದ ಹೆಮ್ಮೆಯ ಸಾಹಸಿ ಮಹಿಳೆ ಎ.ಸಿ.ಪಿ. ಡಾ. ಪ್ರಿಯದರ್ಶಿನಿ ಸಾಣಿಕೊಪ್ಪ

ಆದಿಕಾಲದಿಂದಲೂನಮ್ಮದೇಶದಲ್ಲಿಅನೇಕಸಾಹಸಿ.ವೀರ, ಶೂರ, ನಾರಿಯರು ತಮ್ಮದೇ ಆದಂತಹ ಅದ್ಭುತವಾದ ಕೊಡುಗೆಯನ್ನುನಮ್ಮದೇಶ ಸೇವೆಗಾಗಿ ನೀಡಿದ್ದಾರೆ. ಅವರ ತ್ಯಾಗ ಬಲಿದಾನಗಳ ಪ್ರತೀಕವೇ ಇಂದು ಎಲ್ಲ ಮಹಿಳೆಯರು ನಮ್ಮ ದೇಶಕ್ಕೆ ತಮ್ಮದೇ ಆದಂತಹ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಅಂತಹ ಸಾಹಸಿ ಮಹಿಳಾ ಅಧಿಕಾರಿ ಆಗಿರುವ ಶ್ರೀಮತಿ ಪ್ರಿಯದರ್ಶಿನಿ ಸಾಣಿಕೊಪ್ಪ ಅವರು ಧಾರವಾಡ ಜಿಲ್ಲೆಯ (ಎಸಿಪಿ) ಪೊಲೀಸ್ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವದು ನಮ್ಮೆಲ್ಲರ ಹೆಮ್ಮೆ ಎಂದು ಭಾವಿಸುತ್ತೇನೆ. ಏಕೆಂದರೆ ಯಾವುದೇ ಕಠಿಣ ಪರಿಸ್ಥಿತಿ ಎದುರಾದರೂ ತಮ್ಮ ಜೀವವನ್ನು ಲೆಕ್ಕಿಸದೆ ಹೋರಾಡಿ ಅನೇಕ ಜನರಿಗೆ ಜೀವದಾನ ಮಾಡಿದಂತಹ ಧಾರವಾಡ ನೆಲದ ಹೆಮ್ಮೆಯ ಮಗಳಿವರು. ಛಲವಿಲ್ಲದವರನೊಲ್ಲ ನಮ್ಮ ಕೂಡಲಸಂಗಮ ದೇವ....

ಎನ್ನುವ ಶರಣರ ವಾಣಿಯಂತೆ ಅಪ್ಪಟ ಬಸವ ತತ್ವ ಪರಿಪಾಲಕದಂಪತಿಗಳಾದಂತಹ ಶ್ರೀಮತಿ ಭಾವನಾ ಮತ್ತು ಈಶ್ವರ ಸಾಣಿಕೊಪ್ಪ ಅವರ ಮುದ್ದಿನ ಮಗಳು ಪ್ರಿಯದರ್ಶಿನಿ ಅವರು. ಇವರ ತಾಯಿ ಶಿಕ್ಷಕಿ. ಚಿಕ್ಕಂದಿನಿಂದಲೂ ಸಾಹಸಿ ವ್ಯಕ್ತಿಗಳ ಮತ್ತು ಶರಣರ ವಚನಗಳನ್ನು ಬೋಧಿಸುತ್ತ ಪಾಲನೆ ಮಾಡಿದ್ದಾರೆ. ತಂದೆ ತಾಯಿಗಳ ಮಾರ್ಗದರ್ಶನ ಪಡೆದ ಇವರು ಉನ್ನತ ಹುದ್ದೆಗೆ ಆಯ್ಕೆಗೊಂಡು ತಮ್ಮ ವೃತ್ತಿ ಜೀವನದಲ್ಲಿ ಅನೇಕ ಸಾಹಸ, ಶೌರ್ಯ ಮೆರೆದಿರುವದು ನಮ್ಮೆಲ್ಲರ ಹೆಮ್ಮೆ. ಬೆಂಗಳೂರಿನ ಮಾರತಹಳ್ಳಿ ನಗರದಲ್ಲಿ ಗುಜರಿ ಅಂಗಡಿಯಲ್ಲಿ ಸಿಲಿಂಡರ್ ಸ್ಫೋಟ ಸಂಭವಿಸಿದಾಗ ಬೆಂಕಿ ಅನಾಹುತ ದೊಡ್ಡ ಪ್ರಮಾಣದಲ್ಲಿ ಆಗಬೇಕಾಗಿದ್ದ ಅವಘಡವನ್ನು ತಪ್ಪಿಸಲು ಮತ್ತು ಜೀವಹಾನಿಯನ್ನು ತಪ್ಪಿಸಿ ಸಮಯಕ್ಕೆ ತಕ್ಕಂತೆ ಶೌರ್ಯ ಮೆರೆದಿದ್ದಾರೆ. ಇನ್ನೊಂದು ಸಂಗತಿ ಏನೆಂದರೆ ಪಕ್ಕದಲ್ಲೇ ಪಟಾಕ್ಷಿ ಅಂಗಡಿ ಇದ್ದರೂ ಏನೂ ಹನಿಯಾಗಿಲ್ಲ. ಇದಕ್ಕೆಲ್ಲ ಕಾರಣ ಇವರ ಧೈರ್ಯ ಮತ್ತು ಸಾಹಸಿ ಮನೋಭಾವ, ಸಮಯ ಪ್ರಜ್ಞೆ ಎಂದು



ಹೇಳಬಹುದು. ಎಂತಹ ಕಾಕತಾಳೀಯ ಎಂದರೆ ಕಿತ್ತೂರು ರಾಣಿ ಚನ್ನಮ್ಮ ಜಯಂತಿ ದಿನದಂದೆ ನಮ್ಮ ಧಾರವಾಡ ನಗರದ ಚನ್ನಮ್ಮಳಾಗಿರುವ ಇವರು ತಮ್ಮ ಕರ್ತವ್ಯದಲ್ಲಿ ದಿಗ್ವಿಜಯ ಸಾಧಿಸಿದ್ದಾರೆ. ಅಲ್ಲದೆ ಹಿಂದಿನ ತಿಂಗಳಲ್ಲಿ ಒಂದು ಬಸ್ ಆಫಘಾತವಾಗುವುದನ್ನು ತಪ್ಪಿಸಿದ್ದು, ಬೆಳಗಿನ ಜಾವ ಐದು ಘಂಟೆಗೆ ಸರಿ ಸುಮಾರು 61 ಜನರ ಜೀವ ರಕ್ಷಣೆ ಮಾಡಿದ ಮಹಾತಾಯಿ ಎಂದು ಹೇಳಲು ಸಂತೋಷ ಎನಿಸುತ್ತದೆ.

ಸರಳತೆಯ ಅಧಿಕಾರ: ತಮ್ಮ ವೃತ್ತಿ ಜೀವನದಲ್ಲಿ ಎಷ್ಟೇ ಒತ್ತಡವಿದ್ದರೂ ಜನರ ರಕ್ಷಣೆಗೆ ವ್ಯಯಿಸದೆ ಇರುವ ದಿನಗಳಿಲ್ಲ.

**ಬಸವ ತತ್ವ ಪರಿಪಾಲಕರು:**

"ಕಾಯಕವೇ ಕೈಲಾಸ " ಎಂಬ ಶರಣರ ವಾಣಿಗೆ ಬದ್ಧರಾದವರು.

**ಅಕ್ಕನ ಬಳಗ:**

ತಮ್ಮ ಕರ್ತವ್ಯ ನಿಷ್ಠೆ ಮೆರೆಯುತ್ತಾರೆ ಮತ್ತು ಇವರ ಜೊತೆಗೆ ಇರುವ ಸಿಬ್ಬಂದಿ ವರ್ಗದವರಿಗೂ ಮಾದರಿಯಾಗಿ ಅಕ್ಕನ ಬಳಗದ ಖ್ಯಾತಿ ಪಡೆದುಕೊಳ್ಳುವಲ್ಲಿ ಎರಡು ಮಾತಿಲ್ಲ.

ಕಠಿಣ ಪರಿಸ್ಥಿತಿ ನಿಧಾನವಾಗಿ ಪರಿಹರಿಸಲು ಶಾಂತಿ ಮತ್ತು ಸಹನೆಯಿಂದ ವಾತಾವರಣ ತಿಳಿಗೊಳಿಸಿ ಗಾಂಧೀಜಿ ತತ್ವ ಅಳವಡಿಸಿಕೊಳ್ಳುವಲ್ಲಿ ನಿಸ್ಸೀಮ ಜಾಣತನವನ್ನು ಉಪಯೋಗಿಸಿದಂತಹ

ಇವರು ಇನ್ನೂ ಅನೇಕಾನೇಕ ಸಾಹಸಗಳನ್ನು ಮಾಡಲಿ ಎಂದು ಹಾರೈಸುತ್ತೇನೆ. ಅಲ್ಲದೆ ಮಹಿಳಾ ರಕ್ಷಣೆ ಕುರಿತು ಕಾನೂನು ಅರಿವು ಮೂಡಿಸುವಂತಹ ಕಾರ್ಯಕ್ರಮ ಯಶಸ್ವಿಗೊಳಿಸಿದ್ದಾರೆ. ಇಂತಹ ಅಧಿಕಾರಿಗಳು ನಿಜವಾಗಿಯೂ ನಮ್ಮ ದೇಶದ ಹೆಮ್ಮೆ ಎಂದು ಹೇಳುವಲ್ಲಿ ಅತ್ಯಂತ ಸಂತೋಷವೆನಿಸುತ್ತದೆ.

ನಾನು ನೋಡಿದಂತೆ ಪ್ರಿಯದರ್ಶಿನಿ ಮೇಡಂ ಅವರು ಮೃದು ಮಾತಿನ, ಪ್ರೀತಿ ಮತ್ತು ಗೌರವ ಭಾವನೆಯೊಂದಿಗೆ ಎಲ್ಲರೊಡನೆ ಬೆರೆಯುವ ಅವರು ಸೂಕ್ತ ಸಲಹೆ ನೀಡುತ್ತಾ ಬಂದಿದ್ದಾರೆ. ಅವರ ಈ ಕಾರ್ಯ ನಿಜಕ್ಕೂ ಶ್ಲಾಘನೀಯ ಎಂದು ಹೇಳುತ್ತೇನೆ. ಇವರು ತಮ್ಮ ವೃತ್ತಿ ಜೀವನದಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡಲಿ. ಇವರ ಕೀರ್ತಿ ಆಕಾಶದೆತ್ತರಕ್ಕೆ ಬೆಳೆಯಲಿ ಎಂದು ಪ್ರೀತಿಯಿಂದ ಹಾರೈಸುವೆ.

* * *



**ಲೇಖಕರು:**
**ಶಿಲ್ಪಾ ಮೃತ್ಯುಂಜಯ ಮಿಣಜಿಗಿ.**
**ಶಿಕ್ಷಕಿ ಮತ್ತು ಹವ್ಯಾಸಿ ಬರಹಗಾರರು,**
**ಧಾರವಾಡ.**

# ಹೈಟೆಕ್ ಅಂಗನವಾಡಿ ಕಟ್ಟಡದ ಉದ್ಘಾಟನೆ



**ಮಹಾಲಿಂಗಪುರ :** ಪಟ್ಟಣದ ಹದಿನಾರನೇ ವಾರ್ಡಿನ ಬಳಗಾರ ಪ್ಲಾಟ್ನಲ್ಲಿ ಜಮಖಂಡಿ ಕೆಆರ್ಆಯ್ಡಿಬಿಎಲ್ ನವರು ನಿರ್ಮಿಸಿದ ಹೈಟೆಕ್ ಅಂಗನವಾಡಿ ಕಟ್ಟಡವನ್ನು ಶನಿವಾರ ಶಾಸಕ ಸಿದ್ದು ಸವದಿ ಉದ್ಘಾಟಿಸಿದರು.

ಶಾಸಕ ಸಿದ್ದು ಸವದಿ ಮಾತನಾಡುತ್ತ, 2023–24 ನೇ ಸಾಲಿನ ನಗರ ಮಹತ್ವಾಕಾಂಕ್ಷಿ ಯೋಜನೆಯ ಅಡಿಯಲ್ಲಿ ಸುಮಾರು ಇಪ್ಪತ್ತು ಲಕ್ಷ ರೂ. ವೆಚ್ಚದಲ್ಲಿ ಮಾದರಿ ಅಂಗನವಾಡಿಯನ್ನು ನಿರ್ಮಿಸಲಾಗಿದೆ. ಈ ಭಾಗದ ಸಾರ್ವಜನಿಕರು ತಮ್ಮ ಮಕ್ಕಳನ್ನು ಅಂಗನವಾಡಿಗೆ ಕಳಿಸುವ ಮೂಲಕ ಅಂಗನವಾಡಿಯ ಸೌಲಭ್ಯವನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ, ಮುಖ್ಯಾಧಿಕಾರಿ ನಾಮದೇವ ಲಮಾಣಿ, ಸದಸ್ಯರಾದ ಬಸವರಾಜ ಯರಗಟ್ಟಿ,

ಬಲವಂತಗೌಡ ಪಾಟೀಲ, ಮುಸ್ತಾಕ್ ಚಿಕ್ಕೋಡಿ, ಎಸ್. ಬಿ. ಅಂಗಡಿ, ಬಸನಗೌಡ ಪಾಟೀಲ, ಮಹಾಲಿಂಗ ಕುಳ್ಳೋಳ್ಳಿ, ಈರಪ್ಪ ದಿನ್ನಿಮನಿ, ಶಂಕರಗೌಡ ಪಾಟೀಲ, ಡಾ. ಅಶೋಕ ದಿನ್ನಿಮನಿ, ಗುರುಪಾದ ಅಂಬಿ, ಸಂಜು ರಾಠೋಡ, ಸಿದ್ದು ನಕಾತಿ, ನಜೀರ ಝಾರೆ, ಅರ್ಜುನ ಮೋಪಗಾರ, ಬಸವರಾಜ ಕೊಪ್ಪದ, ಕೆ. ಎಂ. ಬಿಜಾಪೂರ, ಸದಾಶಿವ ಜಿಡ್ಡಿಮನಿ ಸೇರಿದಂತೆ ಹದಿನಾರನೇ ವಾರ್ಡಿನ ಬಿಜೆಪಿ ಮುಖಂಡರು, ಕಾರ್ಯಕರ್ತರು, ಪುರಸಭೆ ಅಧಿಕಾರಿಗಳು, ಮುಧೋಳ ಸಿಡಿಪಿಓ, ಅಂಗನವಾಡಿ ಕಾರ್ಯಕರ್ತೆಯರು ಭಾಗವಹಿಸಿದ್ದರು.

# ಅಪರಿಚಿತ ಶವದ ವಾರಸುದಾರರ ಪತ್ತೆಗೆ ಮನವಿ



**ಕೊಪ್ಪಳ :** ಗದಗ ರೈಲ್ವೆ ಪೋಲಿಸ್ ಠಾಣೆ ವ್ಯಾಪ್ತಿಯ ಕೊಪ್ಪಳ ರೈಲ್ವೆ ನಿಲ್ದಾಣದಲ್ಲಿ ಅಕ್ಟೋಬರ್ 24 ರಂದು ಸುಮಾರು 45 ರಿಂದ 50 ವರ್ಷದ ಅಪರಿಚಿತ ವ್ಯಕ್ತಿಯು ಯಾವುದೋ ರೈಲು ಗಾಡಿಯ ಮುಂದೆ ಬಿದ್ದು ಮೃತಪಟ್ಟಿದ್ದು, ಈ ವ್ಯಕ್ತಿಯ ಕುರಿತು ಯಾವುದೇ ಮಾಹಿತಿ ಲಭ್ಯವಾಗಿರುವುದಿಲ್ಲ.

ಈ ಬಗ್ಗೆ ಗದಗ ರೈಲ್ವೇ ಪೊಲೀಸ್ ಠಾಣೆಯಲ್ಲಿ ಯುಡಿಆರ್ ನಂ: 42/2025 ಕಲಂ: 194 ಬಿ.ಎನ್.ಎಸ್.ಎಸ್. ಅಡಿ ಪ್ರಕರಣ ದಾಖಲಾಗಿದೆ.

**ಮೃತ ವ್ಯಕ್ತಿಯ ಚಹರೆ:**

ಮೃತ ವ್ಯಕ್ತಿಯು ಸುಮಾರು 5.5 ಅಡಿ ಎತ್ತರವಿದ್ದು, ದುಂಡನೆಯ ಮುಖ, ನೀಟಾದ ಮೂಗು, ಸಾದಗಪ್ಪು ಮೈಬಣ್ಣ, ಸಾಧಾರಣ ಮೈಕಟ್ಟು,

ತಲೆಯಲ್ಲಿ ಸುಮಾರು 1/2 ಇಂಚಿನಷ್ಟು ಕಪ್ಪು, ಬಿಳಿ ಮಿಶ್ರಿತ ಕೂದಲು ಹಾಗೂ 1/2 ಇಂಚಿನಷ್ಟು ಕಪ್ಪು ದಾಡಿ-ಮೀಸೆ ಇರುತ್ತವೆ. ಮೃತರ ಮೈಮೇಲೆ ಒಂದು ಬಿಳಿ ಬಣ್ಣದ ಫುಲ್ ಶರ್ಟ್, ಒಂದು ಬಿಳಿ ಕಲರಿನ ಟಿ-ಶರ್ಟ್, ಒಂದು ಕಪ್ಪು ಮತ್ತು ಬಿಳಿ ಗೆರೆಯುಳ್ಳ ನೀಲಿ ಕಲರಿನ ಲುಂಗಿ ಹಾಗೂ ಒಂದು ಚಾಕಲೇಟ್ ಕಲರಿನ ಎಲಾಸ್ಟಿಕ್ ಕಾಚಾ ಧರಿಸಿರುತ್ತಾರೆ.

ಮೇಲ್ಕಂಡ ಚಹರೆಗೆ ಹೋಲಿಕೆಯಾಗುವಂತಹ ವ್ಯಕ್ತಿ ಕಾಣೆಯಾಗಿದ್ದಲ್ಲಿ, ಸಂಬಂಧಿಕರು ಹಾಗೂ ವಾರಸುದಾರರು ಕೂಡಲೇ ಹತ್ತಿರದ ಪೊಲೀಸ್ ಠಾಣೆಗೆ ಅಥವಾ ಗದಗ ರೈಲ್ವೇ ಪೊಲೀಸ್ ಠಾಣೆ ದೂ.ಸಂ: 08372-278744, ಮೊ.ಸಂ: 9480802128, ಇ-ಮೇಲ್: ರಚಿಜಚಿರಡಿಟಥಿಅಠಿ. ರಠ.ಟ ಅಥವಾ ರೈಲ್ವೇ ಪೊಲೀಸ್ ಕಂಟ್ರೋಲ್ ರೂಂ: 080-22871291 ಗೆ ಸಂಪರ್ಕಿಸಿ ಮಾಹಿತಿ ನೀಡುವಂತೆ ಗದಗ ರೈಲ್ವೇ ಪೊಲೀಸ್ ಠಾಣೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಬೆಳೆ ಹಾನಿ ।ವರದಿ ಕೈಸೇರಿದ ಬಳಿಕ ಪರಿಹಾರ: ಸಚಿವ ತಂಗಡಗಿ ಭರವಸೆ



**ಕಾರಟಗಿ:** ಜಿಲ್ಲೆಯಾದ್ಯಂತ ಮಳೆಯಿಂದ ಬೆಳೆ ಹಾನಿಗೀಡಾಗಿದೆ. ಕಾರಟಗಿ ಹೋಬಳಿಯ 80 ಹೆಕ್ಟೇರ್, ಸಿದ್ದಾಪುರ ಹೋಬಳಿ ವ್ಯಾಪ್ತಿಯ 858 ಹೆಕ್ಟೇರ್ ಪ್ರದೇಶದಲ್ಲಿಯ ಬೆಳೆ ಹಾನಿಗೀಡಾಗಿರುವುದು ಪ್ರಾಥಮಿಕ ವರದಿಯಿಂದ ತಿಳಿದಿದೆ. ಹಾನಿಯ ಸಮಗ್ರ ವರದಿ ನೀಡುವಂತೆ ಕಂದಾಯ ಮತ್ತು ಕೃಷಿ ಅಧಿಕಾರಿಗಳಿಗೆ ಸೂಚಿಸಲಾಗಿದೆ. ವರದಿ ಕೈ ಸೇರಿದ ಬಳಿಕ ಸರ್ಕಾರದ ಗಮನಕ್ಕೆ ವಿಷಯ ತಂದು ರೈತರಿಗೆ ಪರಿಹಾರ ಒದಗಿಸಲಾಗುವುದು ಎಂದು ಸಚಿವ ಶಿವರಾಜ ತಂಗಡಗಿ ಹೇಳಿದರು.

ತಾಲ್ಲೂಕಿನ ವಿವಿಧೆಡೆ ಭತ್ತದ ಬೆಳೆ ಹಾನಿಗೀಡಾದ ಪ್ರದೇಶಗಳಿಗೆ ಭಾನುವಾರ ಭೇಟಿನೀಡಿದ ಬಳಿಕ ಸಿದ್ದಾಪುರದಲ್ಲಿ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ತಾಲ್ಲೂಕಿನಲ್ಲಿ ಮಳೆಯ ಹೊಡೆತಕ್ಕೆ ಭತ್ತದ ಬೆಳೆ ಅಪಾರ ಪ್ರಮಾಣದಲ್ಲಿ ನೆಲಕ್ಕೊರಗಿ, ಭತ್ತದ ತೆನೆ ನೀರಿನಲ್ಲಿ ತೊಯ್ದು ಮೊಳಕೆ ಒಡೆಯುತ್ತಿದೆ. ಇನ್ನೂ ಕೆಲವೆಡೆ ಭತ್ತ ಕಟಾವು ಯಂತ್ರದಿಂದ ಕಟಾವು ಮಾಡಲಾಗದ ರೀತಿಯಲ್ಲಿ ಬೆಳೆ ನೆಲಕ್ಕುರುಳಿದೆ. ರೈತರಿಗೆ ಬಹಳಷ್ಟು ನಷ್ಟ ಉಂಟಾಗುವ ಸಾಧ್ಯತೆಯಿದೆ' ಎಂದರು.

ರೈತರ ಬೆನ್ನಿಗೆ ಸರ್ಕಾರ ಇದೆ. ಯರಡೋಣ, ಉಳೇನೂರು, ಈಳಿಗನೂರು, ಸಿದ್ದಾಪುರ, ಮುಸ್ಟೂರು ಸೇರಿದಂತೆ ವಿವಿಧೆಡೆ ಭೇಟಿ ನೀಡಿ ಹಾನಿಯನ್ನು ಪರಿಶೀಲಿಸಿರುವೆ. ಹಾನಿಯ ವಿವರ ಸರ್ಕಾರಕ್ಕೆ ಸಲ್ಲಿಸಿ, ತುರ್ತು ಪರಿಹಾರ ಒದಗಿಸಲಾಗುವುದು' ಎಂದು ಭರವಸೆ ನೀಡಿದರು.

ಜಿ.ಪಂ ಮಾಜಿ ಅಧ್ಯಕ್ಷ ವಿಶ್ವನಾಥರೆಡ್ಡಿ ಹೊಸಮನಿ, ತಾ.ಪಂ ಮಾಜಿ ಸದಸ್ಯರಾದ ಬಸವರಾಜ ನೀರಗಂಟಿ, ಪ್ರಕಾಶ್ ಭಾವಿ, ಮುಖಂಡರಾದ ಶರಣೇಗೌಡ ಬೂದಗುಂಪಾ, ಚನ್ನಬಸಪ್ಪ ಸುಂಕದ, ಕೆ.ಸಿದ್ದನಗೌಡ, ಟಿ.ಬೀರಪ್ಪ, ಅಬ್ದುಲ್ ರೌಫ್, ದೊಡ್ಡಪ್ಪದೇಸಾಯಿ, ಅಮರೇಶ ಬರಗೂರು, ನಾಗೇಶ ಸಿಂಧನೂರು, ಪ್ರಮೋದ ಭಾವಿ, ಸಣ್ಣ ಅಗರೆಪ್ಪ, ಎಡಿಸಿ ಸಿದ್ದರಾಮೇಶ್ವರ, ಉಪವಿಭಾಗಾಧಿಕಾರಿ ಮಹೇಶ್ ಮಾಲಗಿತ್ತಿ, ಕೃಷಿ ಇಲಾಖೆ ಅಧಿಕಾರಿಗಳಾದ ರುದ್ರೇಶಪ್ಪ, ಅಭಿಲಾಶಾ ಸಿ.ಆರ್., ತಾಪಂ ಇಒ ಲಕ್ಷ್ಮೀದೇವಿ, ತಹಶೀಲ್ದಾರ್ ಎಂ.ಕುಮಾರಸ್ವಾಮಿ, ಕಂದಾಯ ನಿರೀಕ್ಷಕ ಶರಣಪ್ಪ ಉಪಸ್ಥಿತರಿದ್ದರು.

# ಕೊಲೆ ಪ್ರಕರಣ: ಆರೋಪಿಗಳ ಬಂಧನ



**ಗಂಗಾವತಿ :** ಕೆಲದಿನಗಳ ಹಿಂದೆ ನಗರದಲ್ಲಿ ನಡೆದ ಬಿಜೆಪಿ ಯುವ ಮೋರ್ಚಾ ನಗರ ಘಟಕದ ಅಧ್ಯಕ್ಷ ವೆಂಕಟೇಶ ಕುರುಬರ ಕೊಲೆಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೊಲೆಗೆ ಸುಪಾರಿ ನೀಡಿದ ಆರೋಪಿ ರವಿ, ಗಂಗಾಧರ ಗೌಳಿ ಅವರನ್ನು ಪೊಲೀಸರು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಆರೋಪಿಗಳು, ಸಿನಿಮೀಯ ರೀತಿಯಲ್ಲಿ ಕಾರಿನಲ್ಲಿ ಬಂದು ವೆಂಕಟೇಶ ಕುರುಬರ ಅವರ ಬೈಕ್ ಬೆನ್ನಟ್ಟಿ, ಡಿಕ್ಕಿ ಹೊಡೆದು, ಕೆಳಗೆ ಕೆಡವಿ, ಮಚ್ಚುಗಳಿಂದ ಮನಬಂದಂತೆ ಕಡಿದು ಕೊಲೆ ಮಾಡಿ, ಬೆಳಿಗ್ಗೆ ಕಂಪ್ಲಿ ಪೊಲೀಸ್ ಠಾಣೆಯಲ್ಲಿ ನಾಲ್ವರು ಆರೋಪಿಗಳು ಶರಣಾಗಿದ್ದರು. ನಂತರ ಪೊಲೀಸರು ತಮ್ಮ ಪ್ರಕ್ರಿಯೆ ನಡೆಸಿ, ಬಂಧಿಸಿದ್ದರು.

ಪ್ರಕರಣ ತನಿಖೆ ಮಾಡುತ್ತಿದ್ದಂತೆ ಒಟ್ಟು 7 ಆರೋಪಿಗಳು


ಪ್ರಕರಣದಲ್ಲಿ ತಪ್ಪಿತಸ್ಥರು ಎಂಬುದು ತಿಳಿದು ಬಂದಿತ್ತು. ಉಳಿದ ಆರೋಪಿಗಳ ಪತ್ತೆಗೆ 4 ತಂಡಗಳನ್ನು ರಚಿಸಿ, ನಿರಂತರ ಕಾರ್ಯಾಚರಣೆ ನಡೆಸಿ, ಕೆಲ ದಿನಗಳ ಹಿಂದೆ ಕಾರ್ತಿಕ್ ಎಂಬ ಆರೋಪಿಯನ್ನು ಬಂಧಿಸಲಾಗಿತ್ತು. ನಂತರ ಇನ್ನಿಬ್ಬರ ಪತ್ತೆಗೆ ಪೊಲೀಸರು ಆರೋಪಿಗಳ ಸಂಬಂಧಿಗಳನ್ನು ಕರೆಯಿಸಿ ವಿಚಾರಿಸಿದರೂ ಸುಳಿವು ಸಿಕ್ಕಿರಲಿಲ್ಲ. ಹೀಗಾಗಿ ಕೊಲೆಯಾದ ವೆಂಕಟೇಶನ ಪಾಲಕರು ಡಿವೈಎಸ್‌ಪಿ ಕಚೇರಿ ಎದುರು ಆರೋಪಿಗಳ ಬಂಧನಕ್ಕೆ, ಮಗನ ಸಾವಿಗೆ ನ್ಯಾಯ ದೊರಕಿಸಬೇಕು ಎಂದು ಆಗ್ರಹಿಸಿ ಪ್ರತಿಭಟನೆ ನಡೆಸಿದ್ದರು.

ಆರೋಪಿಗಳ ಬಂಧನ ಸವಾಲಾಗಿ ಸ್ವೀಕರಿಸಿದ ಪೊಲೀಸರು, ಕೊಲೆಗೆ ಸಹಕಾರ ನೀಡಿದ ಆರೋಪಿದಡಿ ಆರೋಪಿ ರವಿ ಹೆಂಡತಿ, ಮಗು ಸೇರಿ ಇನ್ನಿಬ್ಬರು

ಆರೋಪಿಗಳನ್ನು ಬಳ್ಳಾರಿಯಲ್ಲಿ ಹಿಡಿದು, ಗಂಗಾವತಿಗೆ ಕರೆತಂದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದರು. ಇಬ್ಬರ ಬಂಧನಕ್ಕೆ ಕಾರ್ಯಾಚರಣೆ ನಡೆಸಿದ ಪೊಲೀಸರು, ಕಲಬುರಗಿಯ ಹೊರವಲಯದಲ್ಲಿ ಶನಿವಾರ ರಾತ್ರಿ ಸೆರೆಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನಂತರ ಗಂಗಾವತಿ ಹೊರಭಾಗದಲ್ಲಿ ಇರಿಸಿ, ಬಿಗಿ ಪೊಲೀಸ್ ಭದ್ರತೆ ನಡುವೆ ನ್ಯಾಯಾಲಯಕ್ಕೆ ಹಾಜರುಪಡಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

# ಹಗಲಲ್ಲಿ ವಿದ್ಯುತ್ ಪೂರೈಕೆ: ಹಗಲು ಕನಸು



**ಕುಷ್ಟಗಿ :** ನಿರೀಕ್ಷೆಗೂ ಮೀರಿ ವಿದ್ಯುತ್ ಉತ್ಪಾದನೆಯಾಗುತ್ತಿದೆ. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಗಾಳಿಯಂತ್ರ, ಸೋಲಾರ್ ವಿದ್ಯುತ್ ಉತ್ಪಾದನೆ ಹೆಚ್ಚುತ್ತಿದೆ. ಈ ಭಾಗದಲ್ಲಿ ನೀರಾವರಿಗೆ ಕೊಳವೆಬಾವಿ, ಕೃಷಿ ಪಂಪ್‌ಸೆಟ್‌ಗಳೆ ಆಸರೆ. ಸದ್ಯ ಬೇಡಿಕೆಗಿಂತಲೂ ಹೆಚ್ಚು ವಿದ್ಯುತ್ ಉತ್ಪಾದನೆ ಆಗುತ್ತಿರುವುದರಿಂದ ಕೃಷಿಪಂಪ್‌ಸೆಟ್‌ಗಳಿಗೆ ಹಗಲಿನಲ್ಲಿ ವಿದ್ಯುತ್ ಪೂರೈಸಲು ಸಾಧ್ಯವಿದೆಯಲ್ಲವೆ? ಎಂಬ ರೈತರ ಪ್ರಶ್ನೆಗೆ ಮಾತ್ರ ಉತ್ತರ ಸಿಕ್ಕಿಲ್ಲ.

ವಿದ್ಯುತ್ ಉತ್ಪಾದನೆ ಹೆಚ್ಚಾದರೂ ಪಂಪ್‌ಸೆಟ್‌ಗಳಿಗೆ ವಿದ್ಯುತ್ ತಲುಪಿಸುವ ಸಾಮರ್ಥ್ಯ ಇಲ್ಲದಂತಾಗಿದೆ. ಈ ಭಾಗದ ರೈತರು ಗಾಳಿ ವಿದ್ಯುತ್ ಉತ್ಪಾದನೆ, ಟವರ್, ಸ್ಟೇಷನ್‌ಗಳ ನಿರ್ಮಾಣಕ್ಕೆ ಭೂಮಿ ನೀಡಿ-ದ್ದರೂ ಪ್ರಯೋಜನವಾಗಿಲ್ಲ. ಕತ್ತಲಲ್ಲೇ ತೋಟಕ್ಕೆ ನೀರುಣಿಸುವ ಅನಿವಾರ್ಯ ಬದಲಾಗಿಲ್ಲ ಎನ್ನುವ ಕೊರಗು ರೈತರದ್ದು.

**ಕಾರಣ ಏನು:** ಕೃಷಿ ಪಂಪ್‌ಸೆಟ್‌ಗಳಿಗೆ ಪೂರೈಸುವುದಕ್ಕೆ ವಿದ್ಯುತ್ ಪರಿವರ್ತಕಗಳ, ವಿತರಣಾ ಉಪ ಕೇಂದ್ರಗಳು ಹೀಗೆ ಅಗತ್ಯವಿರುವ ಮೂಲಸೌಲಭ್ಯವನ್ನು ಒಳಗೊಂಡ ಸಾಮರ್ಥ್ಯ ಇರಬೇಕು. ಹಾಗಾಗಿ ಸದ್ಯದ ಪರಿಸ್ಥಿತಿಯಲ್ಲಿ ಸರತಿ ಆಧಾರದ ಮೇಲೆ ಕೃಷಿ ಪಂಪ್‌ಸೆಟ್‌ಗಳಿಗೆ 7 ತಾಸು ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ. ಏಕಕಾಲಕ್ಕೆ ಹಗಲಿನಲ್ಲಿ ಎಲ್ಲ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಸಿದರೆ ಒತ್ತಡ ನಿಭಾಯಿಸುವ ಶಕ್ತಿ ಉಪ ಕೇಂದ್ರಗಳಿಗಿಲ್ಲ. ಇನ್ನು ಹತ್ತು ತಾಸು ವಿದ್ಯುತ್ ಪೂರೈಸುವುದಕ್ಕೆ ಸದ್ಯಕ್ಕಂತೂ ಸಾಧ್ಯವಿಲ್ಲ. ಅಲ್ಲದೆ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಸುವ ಅವಧಿ ಸರ್ಕಾರದ ಮಟ್ಟದಲ್ಲಿ ನಿಗದಿಯಾಗುತ್ತದೆ. ಯೂನಿಟ್ ಆಧಾರದ ಮೇಲೆ ಆಯಾ ಉಪ ವಿಭಾಗಗಳಿಗೆ ರಾಜ್ಯದ ಲೋಡ್ ಡಿಸ್ಪ್ಯಾಚ್ ಸೆಂಟರ್ (ಎಲ್‌ಡಿಸಿ) ನೋಡಿಕೊಳ್ಳುತ್ತದೆ ಎನ್ನುತ್ತವೆ ಜೆಸ್ಕಾಂ ಮೂಲಗಳು. ಸದ್ಯದ ಸ್ಟೇಷನ್‌ಗಳ ಸಾಮರ್ಥ್ಯ ಹೆಚ್ಚಿಸುವುದು, 33 ಕೆವಿ ವಿದ್ಯುತ್ ಉಪ ಕೇಂದ್ರಗಳ ಸಂ-ಖ್ಯೆ ಹೆಚ್ಚಳ ಹೀಗೆ ವ್ಯವಸ್ಥೆ ಉನ್ನತೀಕರಣ ಆಗಬೇಕಿದೆ.

ಲೆಕ್ಕಕ್ಕಿಲ್ಲದ್ದೇ ಸಮಸ್ಯೆ: ಜೆಸ್ಕಾಂ ಮೂಲಗಳ ಪ್ರಕಾರ ತಾಲ್ಲೂಕಿನಲ್ಲಿ 13,210 ಕೃಷಿಪಂಪ್‌ಸೆಟ್‌ಗಳಿವೆ. ಅಧಿಕೃತ ಪಂಪ್‌ಸೆಟ್‌ಗಳ ಮಾನದಂಡದ ಆಧಾರದ ಮೇಲೆ ಉಪ ವಿಭಾಗಕ್ಕೆ ಇಂತಿಷ್ಟು ಯೂನಿಟ್ ವಿದ್ಯುತ್ ಎಂದು ನಿಗದಿಪಡಿಸಲಾಗಿರುತ್ತದೆ. ಆದರೆ ದಾಖಲೆಯಲ್ಲಿಲ್ಲದ ಅನಧಿಕೃತ ಪಂಪ್‌ಸೆಟ್‌ಗಳು ಬಹಳಷ್ಟಿದ್ದರೂ ವಿತರಣಾ ವ್ಯವಸ್ಥೆ ಮೇಲೆ ಭಾರ ಬೀಳುತ್ತಿದೆ.

ಹೀಗಿದೆ ರೈತರ ಸಮಸ್ಯೆ: ಸದ್ಯದ ವಿದ್ಯುತ್ ವಿತರಣಾ ವ್ಯವಸ್ಥೆ ಪ್ರಕಾರ ಒಂದು ಪಾಳಿಯಲ್ಲಿ ಬೆಳಗಿನ ಜಾವ 4ರಿಂದ 11 ಗಂಟೆಯವರೆಗೆ ಇನ್ನೊಂದು ಪಾಳಿಯಲ್ಲಿ ಬೆಳಿಗ್ಗೆ 11ರಿಂದ ಸಂಜೆ 6 ಗಂಟೆಯವರೆಗೆ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಸಲಾಗುತ್ತಿದೆ. ಬೆಳಗಿನ ಜಾವ 3 ಗಂಟೆಗೆ ಎದ್ದು ಕತ್ತಲಲ್ಲೇ ವಿಷಜಂತುಗಳು ಇರುವುದನ್ನು ಲೆಕ್ಕಿಸದೆ ಜೀವಕೈಯಲ್ಲಿ ಹಿಡಿದುಕೊಂಡು ಹೋಗಬೇಕು. ಈ ಸಮಸ್ಯೆ ಸರ್ಕಾರಕ್ಕೆ ಅರ್ಥವಾಗುತ್ತಿಲ್ಲ. ಸರ್ಕಾರದ ಮೇಲೆ ಒತ್ತಡ ಹೇರುವಲ್ಲಿ ಈ ಭಾಗದ ಸಂಸದರು, ಸಚಿವರು, ಶಾಸಕರು ವಿಫಲರಾಗಿದ್ದಾರೆ ಎಂಬ ಅಸಮಾಧಾನ ರೈತರದ್ದು.

ಹಗಲು ವೇಳೆ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಕೆ ಕುರಿತು ರೈತರ ಮನವಿಗೆ ಅನುಗುಣವಾಗಿ ಜೆಸ್ಕಾಂ ದಿಂದ ಬೇಡಿಕೆ ಬಂದಿದ್ದು ಇಲಾಖೆ ಗಮನಕ್ಕೆ ತರಲಾಗಿದೆ. ಈ ವಿಷಯದಲ್ಲಿ ಕೆಪಿಟಿಸಿಎಲ್ ಮುತುವರ್ಜಿ ವಹಿಸಿದೆ' ಎಂದು 220 ಕೆ.ವಿ. ನೋಡಲ್ ಅಧಿಕಾರಿಯಾಗಿರುವ ಎಇಇ ಟಿ.ಎಂ. ಜಂಬುನಾಥ್ ಹೇಳುತ್ತಾರೆ.

# ಸಾವಿನಲ್ಲೂ ಒಂದಾದ ದಂಪತಿ

**ಕಮಲನಗರ:** ತಾಲ್ಲೂಕಿನ ಮೂಧೋಳ(ಬಿ) ಗ್ರಾಮದ ಗುಂಡಪ್ಪ ಹೊಡಗೆ (85) ಹಾಗೂ ಅವರ ಪತ್ನಿ ಲಕ್ಷ್ಮೀಬಾಯಿ ಗುಂಡಪ್ಪ ಹೊಡಗೆ (80) ಸಾವಿನಲ್ಲೂ ಒಂದಾಗಿದ್ದಾರೆ.

ಗಂಡ, ಹೆಂಡತಿ ಇಬ್ಬರೂ ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದರು.

ಗುರುವಾರ ಸಂಜೆ 7 ಗಂಟೆಗೆ ಲಕ್ಷ್ಮೀಬಾಯಿ ನಂತರ ರಾತ್ರಿ 10 ಗಂಟೆ ಸುಮಾರಿಗೆ ಗಂಡ ಗುಂಡಪ್ಪ ಹೊಡಗೆ ನಿಧನರಾದರು ಎಂದು ಮೂಲಗಳು ತಿಳಿಸಿವೆ.

# ಪರಿಷತ್ ಸದಸ್ಯೆ, ಚಿತ್ರನಟಿ ಡಾ. ಉಮಾಶ್ರೀಗೆ ಸನ್ಮಾನ



**ಮಹಾಲಿಂಗಪುರ :** ರತ್ನನ ಪ್ರಪಂಚ ಚಿತ್ರದ ಅಭಿನಯಕ್ಕಾಗಿ 2021 ನೇ ಸಾಲಿನ ರಾಜ್ಯ ಸರ್ಕಾರದ ಅತ್ಯುತ್ತಮ ಪೋಷಕ ನಟಿ ಪ್ರಶಸ್ತಿ ಪಡೆದ ಕಲಾವಿದೆ, ಮಾಜಿ ಸಚಿವೆ,

ವಿಧಾನ ಪರಿಷತ್ ಸದಸ್ಯೆ ಡಾ. ಉಮಾಶ್ರೀ ಅವರನ್ನು ಪುರಸಭೆ ಸದಸ್ಯ ಪ್ರಲ್ಹಾದ ಸಣ್ಣಕ್ಕಿ ಅವರು ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ಪುರಸಭೆ ಸದಸ್ಯರಾದ ಬಸವರಾಜ ಚಮಕೇರಿ, ರವಿ ಜವಳಗಿ, ವಿನೋದ ಸಿಂಪಿ, ಮುಖಂಡರಾದ ಈಶ್ವರ ಚಮಕೇರಿ, ಮಹಾಲಿಂಗ ಮಾಳಿ, ಸತೀಶ ಜುಂಜರವಾಡ, ನಾರಾಯಣ ಜೋಷಿ, ಸುರೇಶ ಸಣ್ಣಕ್ಕಿ, ಶಿವಾನಂದ ಹುಣಶ್ಯಾಳ, ಚಂದ್ರಶೇಖರ ಮೋರೆ, ಹಣಮಂತ ಅಳ್ಳಿಮಟ್ಟಿ, ಸದಾಶಿವ ಮಾಚಕನೂರ, ಪ್ರವೀಣ ಸಣ್ಣಕ್ಕಿ, ಅನು ಸಣ್ಣಕ್ಕಿ, ರಾಘವೇಂದ್ರ ಸಣ್ಣಕ್ಕಿ ಸೇರಿದಂತೆ ಇನ್ನೂ ಹಲವರು ಉಪಸ್ಥಿತರಿದ್ದರು.

# ಕ್ಯೂ ಆರ್ ಕೋಡ್ ವಿತರಣಾ ಕಾರ್ಯಕ್ರಮ

## ರಾಷ್ಟ್ರೀಕೃತ ಬ್ಯಾಂಕಿನ ಎಲ್ಲ ಸೌಲಭ್ಯಗಳನ್ನು ನೀಡಲಾಗುವುದು




**ರಬಕವಿ-ಬನಹಟ್ಟಿ :** ಕಾಡಸಿದ್ಧೇಶ್ವರ ಪಟ್ಟಣ ಸಹಕಾರ ಬ್ಯಾಂಕು ಬರಲಿರುವ ಎರಡು ತಿಂಗಳುಗಳ ಅವಧಿಯಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳು ನೀಡುವ ಎಲ್ಲ ಸೌಲಭ್ಯಗಳನ್ನು ನಮ್ಮ ಗ್ರಾಹಕರಿಗೂ ಕೂಡ ಒದಗಿಸಲಾಗುವುದು.

ಸದಸ್ಯರು ಬ್ಯಾಂಕಿನ ಜೊತೆಗೆ ನಿರಂತರವಾಗಿ ವ್ಯವಹಾರದಲ್ಲಿ ತೊಡಗಿಕೊಳ್ಳಬೇಕು ಎಂದು ಬ್ಯಾಂಕ್ ಅಧ್ಯಕ್ಷ ಸುರೇಶ ಅಬಕಾರ ತಿಳಿಸಿದರು.

ಅವರು ಸೋಮವಾರ ಬ್ಯಾಂಕಿನ ಸಭಾ ಭವನದಲ್ಲಿ ಹಮ್ಮಿಕೊಳ್ಳಲಾದ ಕ್ಯೂ. ಆರ್. ಕೋಡ್ ಉದ್ಘಾಟನೆ ಮತ್ತು ಧ್ವನಿ ಪೆಟ್ಟಿಗೆಗಳ ವಿತರಣಾ ಸಮಾರಂಭದಲ್ಲಿ ಮಾತನಾಡಿದರು.

ವ್ಯಾಪಾರಸ್ಥರ ಸಂಘದ ಅಧ್ಯಕ್ಷ ಬದ್ರಿನಾರಾಯಣ ಭಟ್ಟಡ ಮಾತನಾಡಿ, ಬನಹಟ್ಟಿ ವ್ಯಾಪಾರಸ್ಥರ ಸಂಘದ ಎಲ್ಲ ಸದಸ್ಯರು ಕ್ಯೂ. ಆರ್. ಕೋಡಗಳನ್ನು ಬಳಸುವಂತೆ ತಿಳಿಸಲಾಗುವುದು. ಆಧುನಿಕ ಸೌಲಭ್ಯಗಳನ್ನು ಗ್ರಾಹಕರಿಗೆ ನೀಡುವುದರಿಂದ ಬ್ಯಾಂಕುಗಳು ಅಭಿವೃದ್ಧಿಯಾಗುತ್ತವೆ ಎಂದರು.

ನಗರದ ಮುಖಂಡ ಸೋಮು ಗೊಂಬಿ ಮಾತನಾಡಿ, ಮುಂದಿನ ದಿನಗಳಲ್ಲಿ ನಗರ ಮತ್ತು ಬೇರೆ ನಗರಗಳಲ್ಲಿ ಶಾಖೆಗಳನ್ನು ಆರಂಭಿಸುವಂತೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಚಿದಾನಂದ ಮಟ್ಟಿಕಲ್ಲಿ, ಗೋವಿಂದ ಡಾಗಾ, ಶಂಕರ ಜುಂಜಪ್ಪನವರ, ವಿಶ್ವಜ ಕಾಡದೇವರ, ವ್ಯವಸ್ಥಾಪಕ ಮಹಾಲಿಂಗ ಬಾಗಲಕೋಟ ಮಾತನಾಡಿದರು.

ಈ ಸಂದರ್ಭದಲ್ಲಿ ಸಿದ್ರಾಮ ಸವದತ್ತಿ, ಶ್ರೀಶೈಲ ಯಾದವಾಡ, ರಾಜು ಬಾಣಕಾರ, ಓಂಪ್ರಕಾಶ ಕಾಬ್ರಾ, ಶಂಕರ ಜುಂಜಪ್ಪನವರ, ಈರಣ್ಣಾ ಬಾಣಕಾರ, ಈಶ್ವರ ಪಟಗುಂಡಿ, ರಾಜಶೇಖರ ಶಿವಪೂಜಿ, ಅಶೋಕ ಮಹಾಜನ, ಲಕ್ಷ್ಮಿ ಕಾಡದೇವರ, ಗೀತಾ ಬಡೇಮಿ ಸೇರಿದಂತೆ ವ್ಯಾಪಾರಸ್ಥರು ಮತ್ತು ಬ್ಯಾಂಕ್ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ನ. 2 ರಂದು ಎರಡು ಪುಸ್ತಕಗಳ ಲೋಕಾರ್ಪಣೆ

**ರಬಕವಿ :** ಇಲ್ಲಿಯ ಎಂ.ವಿ. ಪಟ್ಟಣ ಪದವಿ ಪೂರ್ವ ಕಾಲೇಜಿನ ಅರ್ಥಶಾಸ್ತ್ರ ವಿಷಯದ ನಿವೃತ್ತ ಉಪನ್ಯಾಸಕ ಎಂ. ಎಸ್. ಬದಾಮಿ ಅವರು ಬರೆದಿರುವ ' ರತನ್ ಟಾಟಾ' ಹಾಗೂ ' ಬದುಕು ಮತ್ತು ಬೆವರು ' ಪುಸ್ತಕಗಳ ಬಿಡುಗಡೆ ಸಮಾರಂಭವು ನವೆಂಬರ್ ಎರಡರಂದು ಮುಂಜಾನೆ ಹತ್ತು ಗಂಟೆಗೆ ಇಲ್ಲಿನ ಬನಶಂಕರಿ ಸಮುದಾಯ ಭವನದಲ್ಲಿ ಅದ್ದೂರಿಯಾಗಿ ಜರುಗಲಿದೆ. ಬೃಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದು, ಮಾಜಿ ಬೃಹತ್ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಪುಸ್ತಕ ಬಿಡುಗಡೆ ಮಾಡುವರು. ತೇರದಾಳದ ಖ್ಯಾತ ವೈದ್ಯ ಡಾ. ಮಹಾವೀರ ದಾನಿಗೊಂಡ ಸಮಾರಂಭದ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಉದ್ಯಮಿ ಸಂಗಮೇಶ ನಿರಾಣಿ ಆಗಮಿಸುವರು. ಸಾಹಿತಿಗಳಾದ ಶಿವಾನಂದ ದಾಶ್ಯಾಳ ಹಾಗೂ ಬನಹಟ್ಟಿಯ ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯದ ಉಪನ್ಯಾಸಕಿ ಶ್ರೀಮತಿ ಲಕ್ಷ್ಮೀ ನಿಂಬರಗಿ ಪುಸ್ತಕ ಪರಿಚಯ ಮಾಡಿ ಕೊಡುವರು. ಕಸಾಪ ತಾಲೂಕಾಧ್ಯಕ್ಷ ಮ. ಕೃ. ಮೇಗಾಡಿ ಉಪಸ್ಥಿತ-ರಿರುವರು.

# ನಗರದಲ್ಲಿ ನವೆಂಬರ್ 1 ರಿಂದ 4 ರವರೆಗೆ ಕನ್ನಡ ರಾಜ್ಯೋತ್ಸವ ಆಚರಣೆ

**ಜಮಖಂಡಿ :** ಕನ್ನಡ ಸಂಘ ಮತ್ತು ತಾಲೂಕಾಡಳಿತದ ಸಹಯೋಗದಲ್ಲಿ ಕನ್ನಡ ರಾಜ್ಯೋತ್ಸವವನ್ನು ಅದ್ದೂ-ರಿಯಾಗಿ ಆಚರಿಸಲು ನವೆಂಬರ್ ಒಂದರಿಂದ ರಿಂದ ನಾಲ್ಕರವರೆಗೆ ಸಾಂಸ್ಕೃತಿಕ ಕಾರ್ಯಕ್ರಮದ ಜೊತೆಗೆ ವಿವಿಧ ಕ್ರೀಡೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಕನ್ನಡ ಸಂಘದ ನೂತನ ಅಧ್ಯಕ್ಷ ದೇವಲ ದೇಸಾಯಿ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನವೆಂಬರ್ ಒಂದರಂದು ಸರಿಯಾಗಿ ಮುಂಜಾನೆ 7-30 ಕ್ಕೆ ಹೊಕ್ಕಳಭಾವಿ ಮೈದಾನದಲ್ಲಿ ಕನ್ನಡಸಂಘದ ಅಧ್ಯಕ್ಷರಿಂದ ತಾಯಿಭುವನೇಶ್ವರಿದೇವಿ ಭಾವಚಿತ್ರಕ್ಕೆ ಪೂಜೆ ನಡೆಯಲಿದ್ದು, ಕಂದಾಯ ಉಪ ವಿಭಾಗಾಧಿಕಾರಿ ಶ್ವೇತಾ ಬೀಡಿಕರ ಅವರಿಂದ ಕನ್ನಡ ಧ್ವಜಾರೋಹಣ ನೆರವೇರಲಿದೆ ಎಂದರು. ನವೆಂಬರ್ ಒಂದರಂದು ಮಧ್ಯಾಹ್ನ ತಾಲೂಕಾ ಕ್ರೀಡಾಂಗಣದಲ್ಲಿ ಸಂಗ್ರಾಮ ಕಲ್ಲು ಎತ್ತುವ ಸ್ಪರ್ಧೆ ನಡೆಯಲಿದೆ.

ನವೆಂಬರ ಎರಡು ಮತ್ತು ಮೂರರಂದು ಕಬ್ಬಡ್ಡಿ ಪಂದ್ಯಾವಳಿಗಳು ನಡೆಯಲಿವೆ. ನವೆಂಬರ ನಾಲ್ಕರಂದು ಜಂಗಿ ನಿಕಾಲಿ ಕುಸ್ತಿಗಳನ್ನು ಹಮ್ಮಿಕೊಳ್ಳಲಾಗಿದೆ. ಕನ್ನಡ ರಾಜ್ಯೋತ್ಸವ ನಿಮಿತ್ಯ ಅದ್ದೂರಿ ಆಚರಣೆಗೆ ಕನ್ನಡಾಭಿಮಾನಿಗಳು,

ಕನ್ನಡ ಪ್ರೇಮಿಗಳು, ಸರಕಾರಿ ಇಲಾಖೆಗಳ ಅಧಿಕಾ-ರಿಗಳು ತನು, ಮನ, ಧನದಿಂದ ಸಹಾಯ ಸಹಕಾರ ನೀಡಬೇಕು ಎಂದರು.

# ಕಾನಿಪ ಜಿಲ್ಲಾ ಖಜಾಂಚಿ ನಾಮಪತ್ರ ಸಲ್ಲಿಕೆ




**ವಿಜಯಪುರ :** ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಚುನಾವಣೆಗೆ ವಿಜಯಪುರದ ನಾಡೋಜ ಕನ್ನಡ ದಿನಪತ್ರಿಕೆಯ ಜಿಲ್ಲಾ ವರದಿಗಾರ ರಾಹುಲ ಆಪ್ಟೆ ಪತ್ರಿಕೆಯ ಅವರು ಜಿಲ್ಲಾ ಖಜಾಂಚಿ ಸ್ಥಾನಕ್ಕೆ ಇಂದು ನಾಮಪತ್ರ ಸಲ್ಲಿಸಿದರು. ಜಿಲ್ಲಾ ಚುನಾವಣಾಧಿಕಾರಿ ಟಿ. ಕೆ. ಮಲಗೊಂಡ ಅವರಿಗೆ ಅವರಿಗೆ ನಾಮಪತ್ರ ಸಲ್ಲಿಸಿದರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ವಿಜಯಪುರ.

# ಸಂಪನ್ನಗೊಂಡ ರಬಕವಿ ಘಟ್ಟಗಿ ಬಸವೇಶ್ವರ ರಥೋತ್ಸವ

**ರಬಕವಿ :** ಇಲ್ಲಿಯ ಆರಾಧ್ಯ ದೇವರಾದ ಘಟ್ಟಗಿ ಬಸವೇಶ್ವರ ರಥೋತ್ಸವ ದೀಪಾವಳಿ ಕಡಿಪಾಡ್ಯ ದಿನವಾದ ಭಾನುವಾರ ರಾತ್ರಿ ಅದ್ದೂರಿಯಾಗಿ ಜರುಗಿತು.


ಭಾನುವಾರ ಬೆಳಿಗ್ಗೆ ಬಸವೇಶ್ವರ ಮೂರ್ತಿಗೆ ವಿಶೇಷ ಅಭಿಷೇಕ ಪೂಜೆ ಕಾರ್ಯಕ್ರಮ ಜರುಗಿತು. ನಂತರ ನೂರಾರು ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಹಾಗೂ ಅನೇಕ ಜನಪದ ಕಲೆಗಳ ಸಮಾರಂಭ ಜರುಗಿತು.

ಸಂಜೆ ಏಳಕ್ಕೆ ಅದ್ದೂರಿ ರಥೋತ್ಸವಕ್ಕೆ ರಬಕವಿ ಗುರುದೇವ ಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಶ್ರೀಗಳು ಮಂಗಳರಾತಿ ನೆರವೇರಿಸಿ ಚಾಲನೆ ನೀಡಿದರು. ಹರಹರ ಮಹಾದೇವ ಎಂಬ ಜಯಘೋಷಗಳೊಂದಿಗೆ ಸಾಗುವ ತೇರಿನ ಮೇಲೆ ಉತ್ತತ್ತಿ, ಬೆಂಡು ಬತ್ತಾಸಗಳನ್ನು ಹಾರಿಸಿ ಭಕ್ತರು ತಮ್ಮ ಭಕ್ತಿ ಮೆರೆದರು. ನಗರದ ಹೊಸಪೇಟ ಲೇನ್, ಈಶ್ವರ ಸಣಕಲ ರಸ್ತೆ ಮೂಲಕ ರಥವು ತೆರಳಿ ಶಂಕರಲಿಂಗ ದೇವಸ್ಥಾನದ ವೃತ್ತದಲ್ಲಿ ರಾತ್ರಿ 8-15 ಕ್ಕೆ ಸಂಪನ್ನಗೊಂಡಿತು.

ಸಾವಿರಾರು ಭಕ್ತರು ತಮ್ಮ ಇಷ್ಟಾರ್ಥ ಈಡೇರಲಿ ಎಂದು ಲಕ್ಷಾಂತರ ರೂ. ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಬಸವರಾಜ ಯಂಡಿಗೇರಿ, ರಾಜು ಭಿಲವಡಿ, ಬಸವರಾಜ ಮಟ್ಟಿಕಲ್ಲಿ, ಚಿದಾನಂದ ಸೊಲ್ಲಾಪುರ, ವಿನಾಯಕ ಶೇಗುಣಸಿ, ಪ್ರಭು ಉಮದಿ, ಈಶ್ವರ ನಾಗರಾಳ ಸೇರಿದಂತೆ ನಗರದ ಅನೇಕ ಹಿರಿಯರು ಮಹಿಳೆಯರು, ಯುವಕರು ಭಾಗವಹಿಸಿದ್ದರು.

# ಮಲ್ಲಿಕಾರ್ಜುನ ಶಿವಯೋಗಿಗಳು ಭಗವಂತನ ಅವತಾರಿಗಳು: ಮಹೇಶಾನಂದಶ್ರೀ



**ಜಮಖಂಡಿ :** ಭಕ್ತರ ಭವರೋಗ ಕಳೆದು ಸೂರ್ಯ-ಚಂದ್ರರು ಇರುವವರೆಗೆ ಜ್ಞಾನದ ಮುತ್ತಾಗಿ ಹೋಗಿರುವ ವಿಜಯಪುರ ಜ್ಞಾನಯೋಗಾಶ್ರಮದ ವೇದಾಂತ ಕೇಸರಿ ಮಲ್ಲಿಕಾರ್ಜುನ ಶಿವಯೋಗಿಗಳು ಭಗವಂತನ ಅವತಾರಿಗಳಾಗಿದ್ದರು ಎಂದು ಹಂಚಿನಾಳ ಭಕ್ತಿ ಯೋಗಾಶ್ರಮದ ಮಹೇಶಾನಂದ ಮಹಾಸ್ವಾಮಿಗಳು ಹೇಳಿದರು.

ತಾಲ್ಲೂಕಿನ ಹುಲ್ಯಾಳ ಗುರುದೇವಾಶ್ರಮದ ಗುರುದೇವ ಸತ್ಸಂಗ ಬಳಗದ ಆಶ್ರಯದಲ್ಲಿ ಪ್ರತಿ ತಿಂಗಳ ನಾಲ್ಕನೇ ಭಾನುವಾರ ಹಮ್ಮಿಕೊಳ್ಳುವ ಮಾಸಿಕ ಕಾರ್ಯಕ್ರಮ ಗುರುದೇವ ಸತ್ಸಂಗದ ಅಂಗವಾಗಿ ಅಕ್ಟೋಬರ 26 ರಂದು ನಡೆದ ವೇದಾಂತ ಕೇಸರಿ ಮಲಿಕಾರ್ಜುನ ಶಿವಯೋಗಿಗಳು ಹಾಗೂ ಜ್ಞಾನಯೋಗಿ ಸಿದ್ಧೇಶ್ವರ ಮಹಾಸ್ವಾಮಿಗಳ ಜಯಂತ್ಯುತ್ಸವದ ಸಾನಿಧ್ಯವಹಿಸಿ ಅವರು ಮಲ್ಲಿಕಾರ್ಜುನ ಶಿವಯೋಗಿಗಳ ಜೀವನ ಸಂದೇಶ ಕುರಿತು ಆಶೀರ್ವಚನ ನೀಡಿದರು.

ವೇದಾಂತಕೇಸರಿ ಮಲ್ಲಿಕಾರ್ಜುನ ಶಿವಯೋಗಿಗಳು ಆರುವ ದೀಪ ಹಚ್ಚಲಿಲ್ಲ. ಆರದ ಜ್ಞಾನದೀಪ ಹಚ್ಚಿದರು. ಕೆಳಗೆ ಬಿದ್ದವರನ್ನು ಎತ್ತಿಹಿಡಿದು ತಾಯಿ, ಗುರುವಾಗಿದ್ದರು. ಭಕ್ತರಿಗೆ ಸಂಸ್ಕಾರ ನೀಡಿ ಜ್ಞಾನ ಹಂಚಿ ಮನೆ-ಮನಕ್ಕೆ ಜ್ಞಾನದ ದೀಪ ಹಚ್ಚುವ ಕಾಯಕ ಮಾಡಿದ ಯುಗ ಪುರುಷ ಎನಿಸಿದ್ದಾರೆ ಎಂದರು.

ಜಮಖಂಡಿಯ ಬಸವಜ್ಯೋತಿ ಶಿಕ್ಷಣ ಸಮೂಹ ಸಂಸ್ಥೆಗಳ ಆಡಳಿತಾಧಿಕಾರಿ ಪ್ರೊ. ಬಸವರಾಜ ಕಡ್ಡಿ ಮಾತನಾಡಿ, ಜ್ಞಾನಯೋಗಿ ಸಿದ್ಧೇಶ್ವರ ಮಹಾಸ್ವಾಮಿಗಳು ಉಪಮೆಗೆ ನಿಲುಕದ ಉಪಮಾತೀತರು. ಜೇಬಿಲ್ಲದಂಗಿಯ ವೈರಾಗಿ. ಅರಿವಿನ ಜೋಳಿಗೆ ಹಿಡಿದ ಜಂಗಮಯೋಗಿ. ಸರಳತೆಯ ಸಂತ, ದೈವಿಕತೆಯ ಚರಮೂರ್ತಿ ಆಗಿದ್ದರು ಎಂದರು.

ಸಂಗ್ರಹ ಬುದ್ಧಿಯನ್ನು ಅಳಿದು, ಸಂಬಂಧಗಳ ವ್ಯಾಮೋಹ ಕಳೆದುಕೊಂಡು, ಅಧಿಕಾರ-ಅಂತಸ್ತಿನ ಬಣ್ಣ ಕಳಚಿಕೊಂಡು ಸದಾ ಪರಮಸುಖಿಯಾಗಿದ್ದರು. ಯಾವ ದೋಷಗಳಿಗೆ ಅಂಟಿಕೊಳ್ಳದ ನಿಜೈಕ್ಯರಾಗಿದ್ದರು. ಜ್ಞಾನದ ಅಗ್ನಿಯ ಸ್ಪರ್ಶದಿಂದ ಯಾವ ಅವಗುಣಗಳು ಅವರಲ್ಲಿರಲಿಲ್ಲ. ದೇಹವನ್ನು ದಂಡಿಸದೆ ಒಳಗಿನ ಪರಮಾತ್ಮನ ಅನುಭವಿಸುವ ಬೆಡಗನ್ನು ಅರಿತಿದ್ದರು ಎಂದರು.

ಮೈಗೂರಿನ ಶಿವಾನಂದ ಮಠದ ಗುರುಪ್ರಸಾದ ಮಹಾಸ್ವಾಮಿಗಳು, ಸಿದ್ದಾಪುರದ ಅಡವಿ ಸಿದ್ಧೇಶ್ವರ ಮಠದ ಮಾತೋಶ್ರೀ ಮಹಾದೇವಿತಾಯಿ ಸಾನಿಧ್ಯ ವಹಿಸಿದ್ದರು.

ಮಲ್ಲಿಕಾರ್ಜುನ ಶಿವಯೋಗಿಗಳಿಂದ ಲಿಂಗದೀಕ್ಷೆ ಪಡೆದ ದಾಂಡೇಲಿಯ ವಲಯ ಅರಣ್ಯಾಧಿಕಾರಿ ಅಶೋಕ ಪಾಟೀಲ, ಬೆಳಗಾವಿಯ ಮಲ್ಲಿಕಾರ್ಜುನ ವಿದ್ಯಾಪೀಠದ ಅಧ್ಯಕ್ಷ ಜಿ. ಎಂ. ಪಾಟೀಲ, ಹುನ್ನೂರಿನ ಚಂದ್ರಶೇಖರ ಸಾವಳಗಿ, ಲಕ್ಷ್ಮೇಶ್ವರದ ಚಿದಾನಂದ ಪಾಟೀಲ, ವಿಜಯಲಕ್ಷ್ಮಿ ಪಾಟೀಲ, ಜಮಖಂಡಿಂ-ಯ ವಿಮಲಾ ಬೊಮ್ಮನಹಳ್ಳಿ ಅವರನ್ನು ಸನ್ಮಾನಿಸಲಾಯಿತು.

ಗುರುದೇವಸಂಗೀತಬಳಗದಕಲಾವಿದರಾದ ಗುರುಬಸುಗೌಡ ಪಾಟೀಲ, ಶಿವಾನಂದ ಬಾಡನವರ, ಸಿದ್ದು ಉಪ್ಪಲದಿನ್ನಿ ಸಂಗೀತ ಸೇವೆ ಸಲ್ಲಿಸಿದರು. ಪ್ರಾಚಾರ್ಯ ಡಾ. ಟಿ. ಪಿ. ಗಿರಡ್ಡಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಂಗಮೇಶ ತೆಲಸಂಗ ನಿರೂಪಿಸಿದರು. ಗುರುದೇವಾಶ್ರಮದ ಹರ್ಷಾನಂದ ಮಹಾಸ್ವಾಮಿಗಳು ಶರಣು ಸಮರ್ಪಿಸಿದರು.

# ಶೀಘ್ರವೇ ಅಭಿವೃದ್ಧಿ ಕಾಮಗಾರಿ: ಆರ್.ವಿ. ದೇಶಪಾಂಡೆ



**ಹಳಿಯಾಳ :** ಕ್ಷೇತ್ರದ ಅಭಿವೃದ್ಧಿಗಾಗಿ ಮುಖ್ಯಮಂತ್ರಿವಿಶೇಷಅನದಾನದಡಿ 50 ಕೋಟಿ ಮಂಜೂರಿಯಾಗಿ ಶೀಘ್ರದಲ್ಲಿಯೇಅಭಿವೃದ್ಧಿಕಾಮಗಾರಿ ಆರಂಭವಾಗಲಿದೆ ಎಂದು ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಶಾಸಕ ಆರ್ ವಿ ದೇಶಪಾಂಡೆ ಹೇಳಿದರು.

ಭಾನುವಾರ ತಮ್ಮ ನಿವಾಸದಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಲೋಕೋಪಯೋಗಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ರಸ್ತೆ ಕಾಮಗಾರಿಗಾಗಿ ಹಳಿಯಾಳ ಪುರಸಭೆ ಹಾಗೂ ದಾಂಡೇಲಿ ನಗರಸಭೆ ವ್ಯಾಪ್ತಿಯಲ್ಲಿ ಸುಮಾರು 37ಕೋಟಿ 50 ಲಕ್ಷ ಮಂಜೂರು ಆಗಿರುತ್ತದೆ ಎಂದರು. ದೇವಸ್ಥಾನಗಳ ಜೀರ್ಣೋದ್ಧಾರ, ವಕ್ಫ ಸಂಸ್ಥೆಗಳ ಸಂರಕ್ಷಣೆ, ನೂತನ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಕೊಠಡಿ ನಿರ್ಮಾಣ, ಉನ್ನತ ಶಿಕ್ಷಣ ಇಲಾಖೆಯಿಂದ ಸರಕಾರಿ ಪಾಲಿಟೆಕ್ನಿಕ್, ಜೋಯಿಡಾ ಆವರಣದಲ್ಲಿ ಅಡಿಟೋರಿಯಮ್ ಕಟ್ಟಡದ ಉಳಿದ ಕಾಮಗಾರಿ ಪೂರ್ಣ ಗೊಳಿಸಲು ಹಾಗೂ ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ ದುರಸ್ತಿಗೆ 12 ಕೋಟಿ 50 ಲಕ್ಷ ವೆಚ್ಚದಲ್ಲಿ ಮಾಡಲಾಗುವುದು, ಕ್ಷೇತ್ರದಲ್ಲಿರುವ ಕರ್ನಾಟಕ ಪಬ್ಲಿಕ್ ಶಾಲೆಗಳ ಅಭಿವೃದ್ಧಿ, ವಸತಿ ಶಾಲೆಗಳ ಕಟ್ಟಡ ನಿರ್ಮಾಣ, ಆವಾರ ಗೋಡೆಗಳ ನಿರ್ಮಾಣ, ಪೀಠೋಪಕರಣ, ಪ್ರಯೋಗಾಲಯ ನಿರ್ಮಾಣಕ್ಕಾಗಿ 39 ಕೋಟಿ 95 ಲಕ್ಷ ಮಂಜೂರಿಯಾಗಿದೆ ಎಂದು ಹೇಳಿದರು.

ಎಸ್ ಟಿಪಿ ಹಾಗೂ ಟಿಎಸ್ಪಿ ವಿಶೇಷ ಘಟಕ ಯೋಜನೆ ಅಡಿಯಲ್ಲಿ 1 ಕೋಟಿ 25 ಲಕ್ಷ, ಗಿರಿಜನ ಉಪಯೋಜನೆ ಯಡಿಯಲ್ಲಿ 25 ಲಕ್ಷ ಮಂಜೂರಿ, ಗ್ರಾಮೀಣ ಮಹಿಳೆಯರಲ್ಲಿ ಕೋಳಿ ಸಾಕಣೆ ಉತ್ತೇಜಿಸಲು ಮಹಿಳಾ ಸ್ವ ಸಹಾಯ ಸಂಘದ ಮುಖಾಂತರ ಫಲಾನುಭವಿ ಮಹಿಳಾ ಸದಸ್ಯರಿಗೆ ಉಚಿತ ಕೋಳಿ ಮರಿ ವಿತರಣೆ ಮಾಡಲಾಗುವುದು. ಪಟ್ಟಣದ ಶಿವಾಜಿ ಪಿಯುಸಿ ಕಾಲೇಜುನಲ್ಲಿ ವಾಹನ ತಂತ್ರಜ್ಞಾನ ಪ್ರಯೋಗಾಲಯ ನಿರ್ಮಿಸಲಾಗುವುದು ಎಂದರು.

# ಶಾಸಕ ರಾಜುಗೌಡ ಪಾಟೀಲರು ನಿರಾಶ್ರಿತರ ಬಳಿ ಕ್ಷಮೆ ಕೇಳಬೇಕು: ಶಾಂತಗೌಡ ಪಾಟೀಲ್ ನಡಹಳ್ಳಿ



**ಬಸವನಬಾಗೇವಾಡಿ:** ಕುದುರೆ ಸಾಲವಾಡಿಗೆ ಗ್ರಾಮದ ರಸ್ತೆಯ ಅಗಲೀಕರಣ ವಿಷಯದಲ್ಲಿ ದೇವರ ಹಿಪ್ಪರಗಿಯ ಮತಕ್ಷೇತ್ರದ ಶಾಸಕರಾದ ರಾಜುಗ–ೌಡ ಪಾಟೀಲರು ಕಾನೂನು ಬಾಹಿರವಾಗಿ ಮನೆಗಳನ್ನು ಕೆಡುವಿದ್ದಾರೆ ಕಾರಣ ಶಾಸಕರು ಕೂಡಲೇ ನಿರಾಶ್ರಿತರ ಬಳಿ ಕ್ಷಮೆ ಕೇಳಬೇಕು ಈ ಕಾರ್ಯದಲ್ಲಿ ಭಾಗಿಯಾದ ಅಧಿಕಾರಿಗಳನ್ನು ಮಾನ್ಯ ಜಿಲ್ಲಾಧಿಕಾರಿಗಳು ಕೂಡಲೇ ಅಮಾನತ್ತ ಮಾಡಬೇಕು ಎಂದು ಕಾಂಗ್ರೆಸ್ ಪಕ್ಷದ ಯುವ ಮುಖಂಡರಾದ ಶಾಂತಗೌಡ ಪಾಟೀಲ್ ನಡಹಳ್ಳಿ ಅವರು ಅಗ್ರಹಿಸಿದರು ತಾಲೂಕಿನ ಕುದುರೆ ಸಾಲವಾಡಗಿ ಗ್ರಾಮದಲ್ಲಿ ರಸ್ತೆ ಅಗಲೀಕರಣ ನೆಪದಲ್ಲಿ 143 ಮನೆಗಳನ್ನು ಕೆಡವಿದ್ದಾರೆ ಆ ಕುಟುಂಬಗಳಿಗೆ ಸೂಕ್ತ ಹಾಗೂ ವಿವಿಧ ಬೇಡಿಕೆಗಳನ್ನು ಮುಂದಿಟ್ಟುಕೊಂಡು ತಾಲೂಕಿನ ದಂಡಾಧಿಕಾರಿಗಳ ಕಚೇರಿ ಮುಂದೆ ಕಳೆದ 11 ದಿನಗಳಿಂದ ನಡೆಯುತ್ತಿರುವ ಧರಣಿ ಸತ್ಯಾಗ್ರಹ ಸ್ಥಳಕ್ಕೆ ಶನಿವಾರ ಸಂಜೆ ಭೇಟಿ ನೀಡಿ ಬೆಂಬಲ ಸೂಚಿಸಿ ಮಾತನಾಡಿದರು ಶಾಸಕರು ಚುನಾವಣೆ ವಿಷಯದಲ್ಲಿ ರಾಜಕೀಯ ಮಾಡಲಿ ಆದರೆ ಅಭಿವೃದ್ಧಿನೇ ಪದದಲ್ಲಿ ಬಡವರ ಮನೆಗಳನ್ನು ಕೆಡವಿ ರಾಜಕೀಯ ಮಾಡುವುದು ಸರಿಯಲ್ಲ ಕಾನೂನು ಪ್ರಕಾರ ಅಭಿವೃದ್ಧಿ ಮಾಡಿದರೆ ಅದಕ್ಕೆ ನಮ್ಮ ಸಂಪೂರ್ಣ ಬೆಂಬಲವಿದೆ ಒಂದು ವೇಳೆ ನಿಮ್ಮ ಮನೆಯನ್ನು ಅಳತೆ ಮಾಡಿದರೆ ನಿಮ್ಮ ಮನೆಯ ರಸ್ತೆ ಮೇಲಿದ್ದರೆ ನೀವು ನಿಮ್ಮ ಮನೆಯನ್ನು ತೆರೆವುಗೊಳಿಸಲು ಸಿದ್ಧರಾಗಬೇಕಾಗುತ್ತದೆ ನೀವು ನಿಮ್ಮ ಮನೆಯನ್ನು ತೆರೆವುಗೊಳಿಸಿದರೆ ನಾನು ರಾಜಕೀಯದಿಂದ ದೂರ ಉಳಿಯುತ್ತೇನೆ ಎಂದು ಸವಾಲು ಹಾಕಿದರು ಈ ಸಂದರ್ಭದಲ್ಲಿ ಮುಖಂಡರಾದ ಡಾ. ಪ್ರಭುಗೌಡ ಲಿಂಗದಳ್ಳಿ ಅಶೋಕ್ ಗೌಡ ಪಾಟೀಲ ಅರವಿಂದ ಕುಲಕರ್ಣಿ ಅರವಿಂದ ಸಜ್ಜನ ಮಾತನಾಡಿದರು.

ಮುಖಂಡರಾದ ಹನುಮಂತರಾಯ ಗುಣಿಕಿ ಶಾಂತಗೌಡ ಪಾಟೀಲ ಬಾಳನ್ ಗೌಡ ಪಾಟೀಲ ರಂಜಾನ್ ಮುಜಾವರ ದಾವಲ್ ಸಾಬ್ ಅತ್ತಾರ ಕಾಮೇಶ್ ಭಜಂತ್ರಿ ಪ್ರಮೋದಗೌಡ ಹಚಡದ ಬಾಬು ಪಿಂಜಾರ ನಜೀರ ಗುಡ್ನಾಳ ದಾವಲ್ ಸಾಬ್ ಡವಳಗಿ ಯಾಕೋ ಬ ಅತ್ತಾರ್ ಶ್ರೀಮತಿ ಜಗದೇವಿ ಗುಂಡಳ್ಳಿ ಶ್ರೀಮತಿ ರಮಿಜ ನದಾಫ್ ಅನೇಕ ಜನ ಮಹಿಳೆಯರು ಭಾಗವಹಿಸಿದ್ದರು

# ದಾನಮ್ಮದೇವಿ ಸಭಾಮಂಟಪ ಭೂಮಿ ಪೂಜೆ



**ಇಂಡಿ :** ಭಕ್ತಿಯಿಂದ ಪ್ರಾರ್ಥನೆ ಮಾಡಿದವರಿಗೆ ವರದ ಹಸ್ತವನ್ನು ನೀಡುವ ವರದಾನೇಶ್ವರಿಯೆಂದೇ ಪ್ರಖ್ಯಾತಳಾದ ದಾನಮದೇವಿಯ ಹೆಸರಿನಲ್ಲಿ ಸಭಾಭವನ ನಿರ್ಮಿಸುವ ಮೂಲಕ ಆಧ್ಯಾತ್ಮಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಕಾರ್ಯ–ಕ್ಕೆ ಸಭಾಭವನ ಅಣಿಯಾಗಲಿಯೆಂದು ಶಿರಶ್ಯಾಡದ ಅಭಿನವ ಮುರುಘೇಂದ್ರಶ್ರೀಗಳು ಹೇಳಿದರು. ನಗರದ ದಾನಮ್ಮದೇವಿ ದೇವಸ್ಥಾನದ ಪಕ್ಕದಲ್ಲಿ ವರದಾನೇಶ್ವರಿ ದಾನಮ್ಮದೇವಿ ಸಭಾಮಂಟಪದ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು. ದೇವಸ್ಥಾನ ಕಮಿಟಿ ಅಧ್ಯಕ್ಷ ಉದ್ದಿಮೆದಾರ ಅನಿಲ ಪ್ರಸಾದ ಏಳಗಿ, ಸಿದ್ಧ ಸಿರಿ ಬ್ಯಾಂಕಿನ ನಿರ್ದೇಶಕ ಜಗದೀಶ ಕ್ಷತ್ರಿ, ರಮೇಶ ಗುತ್ತೇದಾರ, ಬಿಜೆಪಿ ಮುಖಂಡ ಕಾಸುಗೌಡ ಬಿರಾದಾರ, ಅರವಿಂದ್ ಹಂಜಗಿ, ಮಲ್ಲಿಕಾರ್ಜುನ ಬುರಕುಲೆ, ಪ್ರಭು ದೇಸಾಯಿ, ದಾನಮ್ಮ ದೇವಿ ದೇವಸ್ಥಾನದ ಸದಸ್ಯರು ಹಾಗೂ ಭಕ್ತರು ಉಪಸ್ಥಿತರಿದ್ದರು.

# ರಾಜ್ಯ ಮಟ್ಟದ ಕೊಕ್ಕೊದಲ್ಲಿ ಪ್ರಥಮ: ಸಾರೋಟಿನಲ್ಲಿ ಮೆರವಣಿಗೆ



**ಆಲಮಟ್ಟಿ :** ಸಾರೋಟಿನಲ್ಲಿ ಮೆರವಣಿಗೆ, ಮೆರವಣಿಗೆಯುದ್ದಕ್ಕೂ ಡಿಜೆಯ ಅಬ್ಬರ, ಸನ್ಮಾನದ ಮಹಾಪೂರ. ಹಲವೆಡೆ ಆರತಿ ಮಾಡಿ ಸಿಂಧೂರದ ತಿಲಕ ಹಚ್ಚಿ ಸ್ವಾಗತ. ರಂಗೋಲಿಯ ಚಿತ್ತಾರ, ಪಟಾಕಿಗಳ ಅಬ್ಬರ, ಪರಸ್ಪರ ಗುಲಾಲು ಎರಚುವಿಕೆ...

ಇದು ಬೆಳಗಾವಿ ಜಿಲ್ಲೆಯ ನಾಗನೂರಿನಲ್ಲಿ ಶನಿವಾರ ಜರುಗಿದ 14 ವಯೋಮಾನದೊಳಗಿನ ಬಾಲಕಿಯರ ರಾಜ್ಯ ಮಟ್ಟದ ಕೊಕ್ಕೊ ಪಂದ್ಯಾವಳಿಯಲ್ಲಿ ವಿಜೇತರಾದ ಸಮೀಪದ ಬೇನಾಳ ಆರ್. ಎಸ್. ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯ ಬಾಲಕಿಯರ ತಂಡವನ್ನು ಭಾನುವಾರ ಆಲಮಟ್ಟಿಯಿಂದ ಬೇನಾಳವರೆಗೆ ಸಾರೋಟಿನಲ್ಲಿ ಸ್ವಾಗತಿಸಿದ ಮೆರವಣಿಗೆಯ ದೃಶ್ಯ.

ಆಲಮಟ್ಟಿ ಪೆಟ್ರೋಲ್ ಪಂಪ್ ಬಳಿ ಮೆರವಣಿಗೆಗೆ ಚಾಲನೆ ನೀಡಿದ ನಿಡಗುಂದಿ ಸಿಪಿಐ ಶರಣಗೌಡ ಗೌಡರ ಮಾತನಾಡಿ, 'ಹಳ್ಳಿಯ ಬಾಲಕಿಯರು ಎರಡನೇ ಬಾರಿಗೆ ರಾಜ್ಯ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು ರಾಷ್ಟ್ರ ಮಟ್ಟದಲ್ಲಿ ರಾಜ್ಯವನ್ನು ಪ್ರತಿನಿಧಿಸುತ್ತಿರುವುದು ಸಾಧನೆಯೇ ಸರಿ. ಈ ಚಿಕ್ಕ ಹಳ್ಳಿ ಬಾಲಕಿಯರ ಕ್ರೀಡಾ ಸಾಧನೆ, ಅದಕ್ಕೆ ಗ್ರಾಮಸ್ಥರು, ಶಿಕ್ಷಕರು ನೀಡುತ್ತಿರುವ ಪ್ರೋತ್ಸಾಹ ಶ್ಲಾಘನೀಯ' ಎಂದರು. 'ಈ ಬಾಲಕಿಯರ ಕ್ರೀಡಾ ಸಾಧನೆ ಹೀಗೆ–ಯೇ ಮುಂದುವರಿಯಲಿ, ಅದಕ್ಕೆ ಸೂಕ್ತ ಪ್ರೋತ್ಸಾಹ, ಸಹಕಾರ ನೀಡಲಾಗುವುದು' ಎಂದರು.

ಸರ್ಕಾರಿ ನೌಕರರ ಸಂಘದ ಯೋಜನಾ ಶಾಖೆಯ ಅಧ್ಯಕ್ಷ ಎಸ್.ಬಿ. ದಳವಾಯಿ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಕವಿತಾ ಬಡಿಗೇರ, ಕ್ರೀಡಾಪಟುಗಳನ್ನು ಸನ್ಮಾನಿಸಿ ಸಿಹಿ ವಿತರಿಸಿದರು.

ಜಿ.ಸಿ.ಮುತ್ತಲದಿನ್ನಿ, ಮಹೇಶಗಾಳಪ್ಪಗೋಳ ಮಾತನಾಡಿ ಕ್ರೀಡಾ ಸಾಧಕರ ಪರಿಚಯ ಮಾಡಿದರು.

ಆಲಮಟ್ಟಿಯಿಂದ ಆರಂಭಗೊಂಡ ಸಾರೋಟು ಮೆರವಣಿಗೆ ಆರು ಕಿ.ಮೀ ದೂರದ ಬೇನಾಳ ಗ್ರಾಮದವರೆಗೂ ಸಾಗಿ–ತು. ದಾರಿಯುದ್ದಕ್ಕೂ ಜನ ಹೂ ತೂರುತ್ತ, ಹಲವು ಕಡೆ ಸಾರೋಟ ನಿಲ್ಲಿಸಿ ಪ್ರತಿ ಕ್ರೀಡಾಪಟುವನ್ನೂ ಸ್ವಾಗತಿಸುತ್ತಿರುವ ದೃಶ್ಯ ಕಂಡು ಬಂತು.

ಬೇನಾಳ ಆರ್.ಎಸ್. ಗ್ರಾಮಕ್ಕೆ ಸಾರೋಟು ಮೆರವಣಿಗೆ ಕಾಲಿಡುತ್ತಿದ್ದಂತೆ ಪಟಾಕಿಗಳ ಅಬ್ಬರವೂ ಹೆಚ್ಚಾಗಿ, ಇಡೀ ಗ್ರಾಮವೇ ಸ್ವಾಗತಕ್ಕಾಗಿ ಕಾದಿತ್ತು.

ಗ್ರಾಮದ ಪ್ರತಿ ದೇವಸ್ಥಾನಕ್ಕೂ ತೆರಳಿ ದೇವರ ಆಶೀರ್ವಾದ ಪಡೆದ ಕ್ರೀಡಾಪಟುಗಳನ್ನು ಮನೆ ಮನೆಗಳ ಬಳಿ ನಿಂತು ಅಲ್ಲಿನ ಜನ ಆರತಿ ಬೆಳಗಿ ವಿಜಯದ ತಿಲಕ ಇಡುತ್ತಿರುವ ದೃಶ್ಯ ಕಂಡು ಬಂತು.

ನಂತರ ಸರ್ಕಾರಿ ಪ್ರಾಥಮಿಕ ಶಾಲೆಯ ಆವರಣದಲ್ಲಿ ಬಾಲಕಿಯರು ಗೆದ್ದ ರಾಜ್ಯ ಮಟ್ಟದ ಕೊಕ್ಕೊ ಪಂದ್ಯಾವಳಿಯ ಟ್ರೋಫಿಯನ್ನು ಮುಖ್ಯಶಿಕ್ಷಕ ಹನುಮಂತಪ್ಪ ಇಲಾಳ ಅವರಿಗೆ ಹಸ್ತಾಂತರಿಸಿದರು.

ಗ್ರಾಮದ ಜಿ.ಸಿ. ಮುತ್ತಲದಿನ್ನಿ, ಟಿ.ಎಸ್. ಬಿರಾದಾರ, ಬುಡ್ಡೇಸಾಬ್ ಬಾಗವಾನ, ಬೈಲಪ್ಪ ಬಾಗೇವಾಡಿ, ಗ್ರಾಮ ಪಂಚಾಯ್ತಿ ಅಧ್ಯಕ್ಷ ರಮೇಶ ವಂದಾಲ, ಗ್ಯಾನಪ್ಪ ಚಲವಾದಿ, ಬಿ.ಜಿ. ಬನ್ನೂರ, ರಮೇಶ ಆಲಮಟ್ಟಿ, ಮುರಳಿ ಬಡಿಗೇರ, ಶಿವು ಗದಿಗೆಪ್ಪಗೌಡರ, ಶಾಲಾ ಶಿಕ್ಷಕ ಸಿಬ್ಬಂದಿ ಆನಂದ ರೇವಡಿ, ಸೀತಾರಾಮ ರಾಠೋಡ, ಎಸ್‌ಡಿಎಂಸಿ ಅಧ್ಯಕ್ಷ ಮುನ್ನಾ ಬೆಣ್ಣಿ ಇದ್ದರು.

ಬಾಲಕಿಯರ ಕೊಕ್ಕೊ ತಂಡದ ನಾಯಕಿ ಬೇನಾಳ ಆರ್.ಎಸ್. ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿ ಲಕ್ಷ್ಮೀ ವಡಗೇರಿ, ಅಪೇಕ್ಷಾ ತೋಟದ, ರೂಪಾ ಅಕ್ಕೋಜಿ, ಸಿಂಚನಾ ಚಿನಿವಾಲರ, ದಾನೇಶ್ವರಿ ಬಾಗೇವಾಡಿ,

ಅಯ್ಯಮ್ಮ ಹಾವರಗಿ, ಪ್ರೀಯಾ ಇಂಗಳೇಶ್ವರ, ಯಲಗೂರು ಶಾಲೆಯ ವಿದ್ಯಾರ್ಥಿನಿಯರಾದ ಯಮುನಾ ಪಾತ್ರದ, ರಂಜಿತಾ ಪಾದನಕಟ್ಟಿ, ದೈಹಿಕ ಶಿಕ್ಷಣ ಶಿಕ್ಷಕ ಎನ್.ಬಿ. ದಾಸರ, ಟೀಂ ವ್ಯವಸ್ಥಾಪಕಿ ನೀಲಮ್ಮ ತಳವಾರ ಸಾರೋಟಿನಲ್ಲಿದ್ದರು.

# ರಾಜಕೀಯ ವಿಡಂಬನೆಗಳು ನಾಟಕಗಳ ರೂಪದಲ್ಲಿ ಬರಲಿ – ಡಾ. ಡಿ. ಎಸ್. ಚೌಗಲೆ ಅಭಿಮತ




**ಬಾಗಲಕೋಟೆ :** ಕೃತಿಯ ಒಟ್ಟಾರೆ ಆಶಯ ಮತ್ತು ಪ್ರಯೋಗಶೀಲತೆಯ ಕುರಿತು ಹಾಗೂ ಹೊಸ ಆಶೋತ್ತರಗಳಿಗೆ ನಾಟಕಗಳು ಹೇಗೆ ತೆರೆದು ಕೊಳ್ಳಬೇಕೆಂಬುದನ್ನು ಹಾಗೂ ಪ್ರಸ್ತುತ ರಾಜಕೀಯ ವಿಡಂಬನೆಗಳನ್ನು ನಾಟಕಗಳ ರೂಪದಲ್ಲಿ ತಂದು ಆ ಮೂಲಕ ಸಾಮಾಜಿಕ ಎಚ್ಚರಿಕೆಯನ್ನು ಮಾಡಬೇಕಾದ ಅವಶ್ಯಕತೆ ಇದೆ. ಹೂಲಿ ಶೇಖರ ಅವರು ಉತ್ತರ ಕರ್ನಾಟಕದ ಭಾಷೆಯನ್ನು ತಮ್ಮ ನಾಟಕಗಳಲ್ಲಿ ಅತ್ಯಂತ ಸಮಥ–ರ್ವಾಗಿ ಬಳಸಿಕೊಂಡವರಲ್ಲಿ ಮುಂಚೂಣಿಯಲ್ಲಿ ನಿಂತಿರುವರು ಎಂದು

ಹಿರಿಯ ನಾಟಕಕಾರ, ಕತೆಗಾರರು, ನಿವೃತ್ತ ಉಪನ್ಯಾಸಕ ಡಾ. ಡಿ. ಎಸ್. ಚೌಗಲೆ ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಬಾಗಲಕೋಟೆ ಮತ್ತು ಆಕೃತಿ ಕನ್ನಡ ಪ್ರಕಾಶನ ಬೆಂಗಳೂರು ಇವರ ಸಹಯೋಗದಲ್ಲಿ 'ಮೂಡಲ ಮನೆ' ಧಾರಾವಾಹಿ ಖ್ಯಾತಿಯ ಹೂಲಿ ಶೇಖರ್ ರವರ 'ಸ್ವಾತಂತ್ರ್ಯದ ಕಿಡಿಗಳು' ಕೃತಿ ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು.

ಸಾಹಿತಿಗಳು ಮತ್ತು ಧಾರವಾಡ ಆಕಾಶವಾಣಿಯ ನಿವೃತ್ತ ನಿರ್ದೇಶಕರಾದ ಡಾ. ಬಸು ಬೇವಿನಗಿಡದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ನಾಟಕದ ಮೂಲಕ ವ್ಯಕ್ತವಾಗುವ ಸಾಮಾಜಿಕ ಎಚ್ಚರಿಕೆಯ ಜೊತೆಗೆ ನೈತಿಕ ಜವಾಬ್ದಾರಿಗಳ ಒಳ ಸುಳಿವುಗಳ ಬಗ್ಗೆ ಹಾಗೂ ಕಥಾತಂತ್ರಗಳ ನೈಪುಣ್ಯತೆ ಪಾತ್ರಗಳಿಗೆ ಜೀವ ತುಂಬುವ ಕ್ರಮ 'ಸ್ವಾತಂತ್ರ್ಯದ ಕಿಡಿಗಳು' ನಾಟಕದಲ್ಲಿ ವ್ಯಕ್ತವಾದಂಥ ಜಾನಪದ ಲಯದ ಕುರಿತು ಮೌಲ್ವಿಕ ನುಡಿಗಳನ್ನಾಡಿದರು.

ಈ ಸ್ವಾತಂತ್ರ್ಯದ ಕಿಡಿಗಳು ಕೃತಿಯು ಜಾನಪದ ಶೈಲಿಯ ಎರಡು ನಾಟಕಗಳನ್ನು ಒಳಗೊಂಡಿದ್ದು, ಉತ್ತರಾರ್ಧ ನಾಟಕವಾದ 'ಹಲಗಲಿ ಬೇಡರ ದಂಗೆ' ನಾಟಕದ ಕುರಿತು ಸಾಹಿತಿಗಳು ಹಾಗೂ ನಿವೃತ್ತ ಪ್ರಾಚಾರ್ಯ ಡಾ. ವೈ. ಎಂ. ಯಾಕೊಳ್ಳಿ ಅವರು ಹಲಗಲಿ ಬೇಡರ ಹೋರಾಟದ ರೋಚಕತೆಯನ್ನು ತಮ್ಮ ಕೃತಿ ಪರಿಚಯದ ನುಡಿಗಳಲ್ಲಿ ವ್ಯಕ್ತಪಡಿಸಿದರು.

ಈ ನೆಲದ ಆಯಾಮದಲ್ಲಿ ನಾಟಕ ತೆರೆದುಕೊಂಡ ಬಗೆಯ ಕು–ರಿತು ತಿಳಿಸಿದರು. ಪೂರ್ವಾರ್ಧ ನಾಟಕ 'ಬಂಟ ಬಂಟೂರು ಬಾಳಪ್ಪ' ನಾಟಕದ ಕುರಿತು ಡಾ. ಚಂದ್ರಶೇಖರ ಹೆಗಡೆ ಅವರು ಪರಿಚಯ ಮಾಡಿಕೊಟ್ಟರು.

ಸ್ವಾತಂತ್ರದ ಕಿಡಿಗಳು ಕೃತಿಯ ಲೇಖಕರಾದ ಹೂಲಿ ಶೇಖರ ರವರು ಈ ನಾಟಕಗಳು ರೂಪುಗೊಂಡ ಬಗೆಯ ಕುರಿತು ಮಾತನಾಡಿದರು. ಬಾಗಲಕೋಟೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಣಾಧಿಕಾರಿ ಸಿದ್ಧರಾಮ ಮನಹಳ್ಳಿ,

ಎ. ಎಸ್. ಬಳಗಾನೂರ, ಎಸ್. ಪಿ. ಚೌಡಾಪೂರ, ಜಿ. ಎಸ್. ಬಿಜಾಪೂರ, ಸಾಹಿತಿಗಳಾದ ಮಲ್ಲಿಕಾರ್ಜುನ ಶೆಲ್ಲಿಕೇರಿ, ಡಾ. ಎಂ. ಬಿ. ರೇವಡಿಗಾರ, ಎಸ್. ಜಿ. ಕೋಟಿ, ಮುತ್ತು ಬಳ್ಳಾ, ವಿಜಯಶ್ರೀ ಮುರನಾಳ, ಮಹಾಂತೇಶ ಕುಂಬಾರ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಎ. ಎಸ್. ಪಾವಟೆ, ಜಿಲ್ಲೆಯ ಸಾಹಿತಿಗಳು, ಕಲಾವಿದರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು ಉಪಸ್ಥಿತ–ರಿದ್ದರು.

ಗಜಲ್ ಕವಿ ಚೇತನ್ ನಾಗರಾಳ ಸ್ವಾಗತಿಸಿದರು. ಗುರು ಗಾಣಿಗೇರ ಸೊಗಸಾಗಿ ನಿರೂಪಿಸಿದರು. ಮಹಾಂತೇಶ ಹೊದ್ಲೂರ ನಾಟಕ ಓದಿದರು.

ವಕೀಲ ಹುಟಗಿ ಕೊನೆಯಲ್ಲಿ ವಂದಿಸಿದರು.

**ವಕ್ಫ್ ಆಸ್ತಿಗಳ ಅಪ್ ಲೋಡಿಂಗ್ ಕಂಪ್ಯೂಟರ್ ಕೇಂದ್ರ ಸ್ಥಾಪನೆ:**

# ಸದುಪಯೋಗಕ್ಕೆ ಸೈಯದ್ ಶಾ ಅಲಿ ಅಲ್ ಹುಸೇನಿ ಕರೆ




**ಕಲಬುರಗಿ :** ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಅಧ್ಯಕ್ಷರು ಮತ್ತು ಹಜರತ್ ಖಾಜಾ ಬಂದಾನವಾಜ ದರ್ಗಾದ ಸಜ್ಜಾದ ನಶೀನ್ ರಾದ ಪೂಜ್ಯ ಹಜ್ರತ್ ಸೈಯ್ಯದ್ ಷಾ ಅಲಿ ಅಲ್ ಹುಸೇನಿ ಅವರು ಉಮ್ಮೀದ್ ವಕ್ಫ್ ಪೋರ್ಟಲ್‌ನಲ್ಲಿ ವಕ್ಫ್ ಆಸ್ತಿಗಳ ಅಪ್‌ಲೋಡಿಂಗ್ ಮಾಡಲ್ ಕಂಪ್ಯುಟರ ಕೇಂದವನ್ನು ನಿನ್ನೆ ಉದ್ಘಾಟಿಸಿದರು.

ಪ್ರಮುಖ ಅಂಶಗಳ ಲ್ಯಾಬ್‌ಗಳ ಉದ್ದೇಶ:ಗುಲ್ಬರ್ಗಾದ 4,250 ವಕ್ಫ್ ಆಸ್ತಿಗಳ ದತ್ತಾಂಶವನ್ನು ಡಿಸೆಂಬರ್ 5, 2025ರೊಳಗೆ ಉಮ್ಮೀದ್ ಪೋರ್ಟಲ್‌ಗೆ ಅಪ್‌ಲೋಡ್ ಮಾಡಲು ಈ ಲ್ಯಾಬ್‌ಗಳನ್ನು ಸ್ಥಾಪಿಸಲಾಗಿದ್ದು, ಇದರ ಸದುಪಯೋಗ ಪಡಿಸಿಕೊಳ್ಳುವಂತೆ ಸೈಯದ್ ಶಾ ಅಲಿ ಅಲ್ ಹುಸೇನಿ ಸಾಹೇಬರು ಕರೆ ನೀಡಿದರು.

ದತ್ತಾಂಶ ಅಪ್‌ಲೋಡ್ ಪ್ರಕ್ರಿಯೆ: ಈ ಕಾರ್ಯವು ಮೂರು ಹಂತಗಳಲ್ಲಿ ನಡೆಯುತ್ತದೆ: ಮೊದಲ ಹಂತ: ಮೇಕರ್ (ಆಚಿಣಚಿ ಇಟಿಣಡಿಥಿ) ಎರಡನೇ ಹಂತ: ಚೆಕರ್ (Verification) ಮೂರನೇ ಹಂತ: ಅನುಮೋದನೆ (Approval)

ಕೃತಜ್ಞತೆ ಮತ್ತು ಸಹಕಾರ: ಈ ಕಾರ್ಯದಲ್ಲಿ ಸಹಕರಿಸಿದ್ದಕ್ಕಾಗಿ ಆಲ್ ಇಂಡಿಯಾ ಮುಸ್ಲಿಂ ಪರ್ಸನಲ್ ಬೋರ್ಡ್‌ನ ಜಿಲ್ಲಾ ಸಂಚಾಲಕ ಡಾ. ಮೊಹಮ್ಮದ್ ಅಸ್ಗರ್ ಚುಲ್‌ಬುಲ್, ಆರಿಫ್ ಅಲಿ ಮನಿಯಾರ್, ರಫೀ ಇಂಜಿನಿಯರ್ ಮತ್ತು ಜಮೀಲುರ್ ರಹಮಾನ್ ಹಾಗೂ ಜಂಟಿ ಕ್ರಿಯಾ ಸಮಿತಿಗೆ (Joint Action Committee) ಅವರು ಧನ್ಯವಾದ ಅರ್ಪಿಸಿದರು.

ರಾಜ್ಯಾದ್ಯಂತದ ಸ್ಥಿತಿ: ರಾಜ್ಯದಾದ್ಯಂತ ಉಮ್ಮೀದ್ ವಕ್ಫ್ ಪೋರ್ಟಲ್‌ನಲ್ಲಿ ದತ್ತಾಂಶ ಅಪ್‌ಲೋಡ್ ಮಾಡುವ ಕಾರ್ಯ ಪ್ರಾರಂಭವಾಗಿದೆ. ಮಂಡಳಿ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು (CEO) ಪ್ರತಿದಿನ ಪ್ರತಿ ಜಿಲ್ಲೆಯಿಂದ ಮಾಹಿತಿ ಪಡೆದು ಮೇಲ್ವಿಚಾರಣೆ ನಡೆಸುತ್ತಿದ್ದಾರೆ.

ಮನವಿ: ಎಲ್ಲಾ ಜಿಲ್ಲೆಗಳು ಮತ್ತು ರಾಜ್ಯದಾದ್ಯಂತದ ಮುತ್ತವಲ್ಲಿಗಳು, ಮಸೀದಿ ಸಮಿತಿಗಳು, ವಕ್ಫ್ ಸಂಸ್ಥೆಗಳು ಮತ್ತು ಎಲ್ಲಾ ಮಿಲ್ಲಿ ತನ್ಜಿಮೌನ್ (ಸಮುದಾಯ ಸಂಸ್ಥೆಗಳು) ಜಿಲ್ಲಾ ವಕ್ಫ್ ಅಧಿಕಾರಿಗಳೊಂದಿಗೆ ಶೀಘ್ರವಾಗಿ ಸಮನ್ವಯ ಸಾಧಿಸಿ ತಮ್ಮ ತಮ್ಮ ವಕ್ಫ್ ಆಸ್ತಿಗಳ ವಿವರಗಳನ್ನು ಉಮ್ಮೀದ್ ಪೋ?ರ್ಟಲ್‌ಗೆ ಅಪ್‌ಲೋಡ್ ಮಾಡುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಡಾ. ಮೊಹಮ್ಮದ್ ಅಸ್ಗರ್ ಚುಲ್‌ಬುಲ್, ಮಝರ್ ಆಲಂ ಖಾನ್, ನಿಜಾಮ್ ಬಾಬಾ ಸಾಹೇಬ್, ಆರಿಫ್ ಅಲಿ ಮನಿಯಾರ್, ಜಮೀಲುರ್ ರಹಮಾನ್, ರಫೀ ಇಂಜಿನಿಯರ್, ಅಫ್ಜಾಲ್ ಮೆಹಮೂದ್, ಜಬ್ಬಾರ್ ಗೋಲಾ ಅಡ್ವೊ–ಕೇಟ್, ಲಾಯಿಕ್ ಪಾಷಾ ಅಡ್ವೊಕೇಟ್, ಹಜ್ರತ್ ಅಲಿ ಕೆಎಂಡಿಸಿ ಜಿಲ್ಲಾ ಡಿಓ, ಅಬ್ದುಲ್ ಮನ್ನಾನ್ ಜಿಲ್ಲಾ ವಕ್ಫ್ ಅಧಿಕಾರಿ ಸೇರಿದಂತೆ ಅನೇಕ ಗಣ್ಯ ವ್ಯಕ್ತಿಗಳು ಉಪಸ್ಥಿತರಿದ್ದರು.

# ರಾಜ್ಯ ಮಟ್ಟಕ್ಕೆ ಎಸ್.ಆರ್.ಎ. ಹೈಸ್ಕೂಲ್ ವಿದ್ಯಾರ್ಥಿಗಳ ಜಿಗಿತ



**ಬನಹಟ್ಟಿ :** ಇತ್ತೀಚೆಗೆ ಬಾ ಗ ಲ ಕೋ ಟೆ ಯ ಲ್ಲಿ ಮುಕ್ತಾಯಗೊಂಡ ಜಿಲ್ಲಾ ಮಟ್ಟದ ಟೇಬಲ್ ಟೆನ್ನಿಸ್ ಪಂದ್ಯಾವಳಿಯಲ್ಲಿ ಇಲ್ಲಿನ ಎಸ್. ಆರ್. ಎ. ಹೈಸ್ಕೂಲಿನ ವಿದ್ಯಾರ್ಥಿಗಳು ವಿಜೇತರಾಗಿ ಹಾವೇರಿಯಲ್ಲಿ ಜರುಗಲಿರುವ ರಾಜ್ಯ ಮಟ್ಟದ ಟೇಬಲ್ ಟೆನ್ನಿಸ್ ಪಂದ್ಯಾವಳಿಗೆ ಆಯ್ಕೆಯಾಗಿದ್ದಾರೆಂದು ಮುಖ್ಯ ಶಿಕ್ಷಕಿ ಎನ್. ಎಸ್. ಕಂಕಣಮೇಲಿ ತಿಳಿಸಿದರು.

17 ವರ್ಷ ವಯೋಮಿತಿಯ ಬಾಲಕರು: ಸಚಿನ ಮಾಲಗಾರ, ಸಮರ್ಥ ಕೊಣ್ಣೂರ, ಗುರುರಾಜ ಗುಂಡಿ, ಜಗದೀಶ ಚನಪನ್ನವರ.

17 ವರ್ಷ ವಯೋಮಿತಿಯ ಬಾಲಕಿಯರು: ವಿಜಯಲಕ್ಷ್ಮೀ ಮಹಾಜನ, ತನುಶ್ರೀ ಮಹಾಜನ, ಜ್ಯೋತಿ ಮುಗತಿ.

14 ವರ್ಷ ವಯೋಮಾನದ ಬಾಲಕರ ವಿಭಾಗದಲ್ಲಿ ಗೌತಮ ಬುದ್ನಿ, ಮದನ ತೇಲಿ, ಸಂಕೇತ ತೆಲಸಂಗ ಮತ್ತು 14 ವರ್ಷ ವಯೋಮಾನದ ಬಾಲಕಿಯರ ವಿಭಾಗದಲ್ಲಿ ವೈಷ್ಣವಿ ಬಿಳ್ಳೂರ ಮತ್ತು ವೈಷ್ಣವಿ ಬಡ್ಡೂರ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ ಎಂದು ದೈಹಿಕ ಶಿಕ್ಷಕರಾದ ಬಿ. ಜೆ. ಜೋರಾಪುರ ಮತ್ತು ಎಂ. ಬಿ. ಶೆಟ್ಟಿ ತಿಳಿಸಿದ್ದಾರೆ.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State